## ಮಾಹಿತಿ (Information)S-2(f) ಇವುಗಳನ್ನು ಒಳಗೊಂಡಿದೆ

1) ದಾಖಲೆ (Document)
2) ಕಡತ (File)
3) ಜ್ಞಾಪನ ಪತ್ರ (Memo)
4) ವಿದ್ಯುನ್ಮಾನ ತಂತಿ (e-mail)
5) ಅಭಿಪ್ರಾಯ (Opinion)
6) ಸಲಹೆ (Suggestion)
7) ಪತ್ರಿಕಾ ಪ್ರಕಟಣೆ (Press release)
8) ಸುತ್ತೋಲೆ (Circular)
9) ಆದೇಶ (Order)
10) ಲಾಗ್‌ಬುಕ್ (Log book)
11) ಗುತ್ತಿಗೆ (Contract)
12) ವರದಿ (Report)
13) ಹಾಳೆ (Paper)
14) ಮಾದರಿ (Model)
15) ವಿದ್ಯುನ್ಮಾನ ರೂಪದಲ್ಲಿ ಅಂಕಿ ಅಂಶ (Data material held in electronic form)
16) ಖಾಸಗಿ ಸಂಸ್ಥೆಯ ಮಾಹಿತಿಯನ್ನು ಸಾರ್ವಜನಿಕ ಪ್ರಾಧಿಕಾರ ಸಂಗ್ರಹಿಸುವ ಅಧಿಕಾರ ಹೊಂದಿದ್ದರೆ ಆ ಮಾಹಿತಿ (Information relating to private body which can be accessed by public authority)

## ನಿರ್ವಹಣೆ

1 ಮಾಹಿತಿಯು ಕಡತ ಟಿಪ್ಪಣಿ (File Notings) ಒಳಗೊಂಡಿದೆ. O.M.No. 1/20/2009-IR 23rd June 2009, ICPB/A-1/CIC/2006 dt:31st Jan 2006.

2 ಮಾಹಿತಿಯು ಏಕೆ? (Why) ಎನ್ನುವ ಪ್ರಶ್ನೆಗಳಿಗೆ ಉತ್ತರ ನೀಡುವುದನ್ನು ಒಳಗೊಂಡಿಲ್ಲ. O.M.No. 1/7/2009-IR 1st June 2009, CIC/OK/A/2006/00154- dt:13th July 2006.

3 ಯಾವುದೇ ಪ್ರಾಧಿಕಾರ ಅಥವಾ ಅಧಿಕಾರಿಗಳು ತಮ್ಮ ಅಧಿಕಾರ ಸ್ಥಾನದಿಂದ ನ್ಯಾಯಿಕ ಅಥವಾ ಅರೇ ನ್ಯಾಯಿಕ ಆದೇಶ ಮಾಡಿದಾಗ, ಈ ಆದೇಶದ ಬಗ್ಗೆ ಸ್ಪಷ್ಟೀಕರನ ಕೇಳಲು ಅವಕಾಶವಿಲ್ಲ. KIC 605 COM 2006.

Scanned by CamScanner

4 ಏಕೆ (Why) ಎನ್ನುವ ಪ್ರಶ್ನೆಗಳಿಗೆ ಉತ್ತರವು ಮಾಹಿತಿ ಪರಿಭಾಷೆಯನ್ನೊಳಗೊಂಡಿಲ್ಲ. ಸಾರ್ವಜನಿಕ ಮಾಹಿತಿ ಅಧಿಕಾರಿಯು ಯಾಕೆ ಒಂದು ವಿಷಯ ಆಗಿದೆ ಅಥವಾ ಆಗಿಲ್ಲ ಎಂಬುದರ ಕುರಿತಾಗಿ ಸ್ಪಷ್ಟತೆ ನೀಡುವ ಅಗತ್ಯತೆ ಇಲ್ಲ. W.P.No. 419 0f 2007 Dt: 03-04-2008 Dr.Selsa Pinto V/s Goa state SIC and others.(Goa HC)

5 ಸಾರ್ವಜನಿಕ ಪ್ರಾಧಿಕಾರವು ಯಾವುದೇ ಸಂಸ್ಥೆಯು ತನಗೆ ಒಂದು ವಿಷಯವನ್ನು ನೀಡಿದಾಗ ಅದಕ್ಕೆ ಕುರಿತಾಗಿ ಪಡೆದುಕೊಂಡ ಸಲಹೆ ಮತ್ತು ಸೂಚನೆ ನೀಡುವುದೆಂದಲ್ಲ. CIC/AT/A/2006/00446 dt:18th Dec 2006.

6 ಸಾರ್ವಜನಿಕ ಪ್ರಾಧಿಕಾರವು ಒಂದು ವಿಷಯದ ಬಗ್ಗೆ ಸಂದೇಹ/ಸಂಶಯಗಳನ್ನು ಸ್ಪಷ್ಟೀಕರಿಸುವ ಅಗತ್ಯತೆ ಇಲ್ಲ. ಅಥವಾ ಅರ್ಜಿದಾರ ಕೋರಿದ ನಮೂನೆಯಲ್ಲೇ ಮಾಹಿತಿ ಒದಗಿಸುವ ಅವಶ್ಯಕತೆ ಇಲ್ಲ. ಸಾರ್ವಜನಿಕ ಪ್ರಾಧಿಕಾರವು ತನ್ನ ಕಚೇರಿಯಲ್ಲಿ ಲಭ್ಯವಿರುವ ಮಾಹಿತಿಯನ್ನಷ್ಟೇ ಒದಗಿಸುವುದು ಹೊರತಾಗಿ ಅರ್ಜಿದಾರ ಕೇಳಿದ ಪ್ರಶ್ನೆಗಳಿಗೆ ತನ್ನ ವೈಯಕ್ತಿಕ ಅಭಿಪ್ರಾಯ ತಿಳಿಸುವುದಲ್ಲ. CIC/MA/2006/00150 dt:19th June 2006.

7 ಸಾರ್ವಜನಿಕ ಮಾಹಿತಿ ಅಧಿಕಾರಿಯು ತನ್ನ ಬಳಿ ಲಭ್ಯವಿದ್ದ ಮಾಹಿತಿಯನ್ನಷ್ಟೇ ಒದಗಿಸತಕ್ಕದ್ದು ಹೊರತಾಗಿ ಅರ್ಜಿದಾರ ಕೋರಿದ್ದಾನೆಂದು ಹೊಸ ಮಾಹಿತಿಯನ್ನು ಸಿದ್ಧಪಡಿಸಿ ಒದಗಿಸತಕ್ಕುದ್ದಲ್ಲ. CIC/MA/2006/00636 dt:11th Sep 2006.

8 ಸಾರ್ವಜನಿಕ ಪ್ರಾಧಿಕಾರವು "ಏಕೆ ಮತ್ತು ಏನು ಮತ್ತು ಯಾವ ಸಂದರ್ಭಗಳಲ್ಲಿ" ಎನ್ನುವ ಪ್ರಶ್ನೆಗಳಿಗೆ ಉತ್ತರಿಸುವ ಅಗತ್ಯತೆ ಇಲ್ಲ. PBA/07/137 dt:10th May 2007.

9 ಮುಂದೆ ಕೈಗೊಳ್ಳಬಹುದಾದ ಕ್ರಮದ ಬಗ್ಗೆ ಕುರಿತಾದ ಮಾಹಿತಿಯನ್ನು ಪೂರೈಸಬೇಕಾಗಿಲ್ಲ. ICPB/A-15/CIC/2006 dt:13th Apr 2006.

10 ಸಾರ್ವಜನಿಕ ಪ್ರಾಧಿಕಾರವು ಅನುಸರಿಸುವ ಕಾನೂನು ಅಥವಾ ನಿಯಮಗಳ ಬಗ್ಗೆ ಸಾರ್ವಜನಿಕ ಮಾಹಿತಿ ಅಧಿಕಾರಿಯ ಅಭಿಪ್ರಾಯ ಕೋರತಕ್ಕುದ್ದಲ್ಲ. ಮತ್ತು ಸಾರ್ವಜನಿಕ ಮಾಹಿತಿ ಅಧಿಕಾರಿಯು ಇದರ ಬಗ್ಗೆ ಅರ್ಥವಿವರಣೆ ನೀಡುವ ಅಗತ್ಯತೆ ಇಲ್ಲ. CIC/AT/A/2006/00154 dt:3rd Nov 2006.

11 ಮಾಹಿತಿ ಆಯೋಗ ನಾಗರಿಕರಿಗೆ, ಸಾರ್ವಜನಿಕ ಪ್ರಾಧಿಕಾರದ ಬಳಿ ಲಭ್ಯವಿರುವ ಮಾಹಿತಿಯನ್ನು ದೊರಕಿಸಿಕೊಡಬಹುದೆ ವಿನಃ ಸಾರ್ವಜನಿಕ ಪ್ರಾಧಿಕಾರವು ಏಕೆ, ಹೇಗೆ ಮತ್ತು ಯಾವ ವಿಧಾನ ಅನುಸರಿಸಿ ತೀರ್ಮಾನ ಕೈಗೊಂಡಿದೆ ಎಂದು ಅಥವಾ ಸಾರ್ವಜನಿಕ ಪ್ರಾಧಿಕಾರವು ತನ್ನ ಚಟುವಟಿಕೆಗಳನ್ನು ಹೇಗೆ ನಡೆಸಬೇಕೆನ್ನುವ ಕುರಿತು ನಿರ್ದೇಶನ ನೀಡುವ ಅಧಿಕಾರ ಹೊಂದಿಲ್ಲ. 34/ICPB/2006 dt:19th Jun 2006.

12 ತಾನು ನೀಡಿದ ದೂರಿನ ಮೇಲೆ ಕ್ರಮ ಕೈಗೊಳ್ಳಲು ಸದ್ಯಕ್ಕೆ ಇರುವ ಅಡೆ ತಡೆ / ನಿರ್ಬಂಧ / ತೊಂದರೆಗಳೇನು ಮತ್ತು ಈ ಸಮಸ್ಯೆ ಬಗೆಹರಿಸಲು ಇರುವ ಮತ್ತು ಪರಿಹಾರದ ಪಟ್ಟಿ "ಮಾಹಿತಿ" ಪದದ ವ್ಯಾಪ್ತಿಗೆ ಒಳಪಟ್ಟಿಲ್ಲ. KIC/6089/PTN/2009 dt:1-10-2009.

Scanned by CamScanner

13 ಸಾರ್ವಜನಿಕ ಮಾಹಿತಿ ಅಧಿಕಾರಿಯು ತನ್ನ ಬಳಿ ಲಭ್ಯವಿದ್ದ ದಾಖಲೆಗೊಂಡ ಮಾಹಿತಿಯನ್ನು ಮತ್ತು ಆ ದಾಖಲೆಗಳಿಂದ ಪಡೆದುಕೊಳ್ಳಬಹುದಾದ ಮಾಹಿತಿಯನ್ನು ನೀಡಬಹುದಾಗಿದ್ದು ಅರ್ಜಿದಾರರ ಸಂದೇಹ ಪರಿಹಾರ ಮಾಡುವುದಲ್ಲ. ಅಥವಾ ಊಹಾ ಪೋಹ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದಲ್ಲ. ಯಾವುದು ದಾಖಲೆಯ ಭಾಗವಲ್ಲವೋ ಅಥವಾ ದಾಖಲೆಗಳಿಂದ ಪಡೆದುಕೊಳ್ಳಲಾಗದು ಅದು ಮಾಹಿತಿ ಅಲ್ಲ. CIC/AA/A/2009/318 & 319 dt:30-7-2009.

14 ಚಾಲ್ತಿಯಲ್ಲಿರುವ ಪರಿವೀಕ್ಷಣಾ ಕಾರ್ಯದ ಉತ್ಪತ್ತಿಯು ದಾಖಲೆಗೆ ರೂಪಾಂತರಗೊಳ್ಳುವ ತನಕ ನಾಗರೀಕರು ಪರಿವೀಕ್ಷಣೆ ಮಾಡುವ ಅವಕಾಶವಿಲ್ಲ. CIC/AD(C)/2009/001239, CIC/AD/C/2009/001279 dt:11th Sep 2006.

15 ಸಲಹೆ(Opinion) ಎನ್ನುವ ಪದವು ಬರವಣಿಗೆ ರೂಪದಲ್ಲಿರುವ ಕಡತ ಟಿಪ್ಪಣಿ ಅಥವಾ ವಿದ್ಯುನ್ಮಾನ ರೂಪದಲ್ಲಿ ಲಭ್ಯವಿರುವ ಸಲಹೆಗೆ ಸಂಬಂಧಿಸಿದ್ದು ಸಾರ್ವಜನಿಕ ಮಾಹಿತಿ ಅಧಿಕಾರಿಯು ಸೃಷ್ಟಿಸಿದ ಸಲಹೆ ಎಂದರ್ಥವಲ್ಲ. CIC/SG/A/2009/002849/6284 dt:31-12-2009.

16 ಸಾರ್ವಜನಿಕ ಪ್ರಾಧಿಕಾರ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಮಾಹಿತಿಯನ್ನು ಮಾತ್ರ ಪೂರೈಸಬಹುದಾಗಿದೆ. CIC/WB/A/2007/00976 dt:24-9-2007.

17 ಮಾಹಿತಿಯನ್ನು ಹೊದಿರುವುದು ಸಮಯಾಧಾರಿತವಲ್ಲ. ಆದಾಗ್ಯೂ ಅತೀ ಕಡಿಮೆ ಸಮಯದ ವರೆಗೆ ಮಾಹಿತಿಯನ್ನು ಹೊಂದಿದ್ದರು ಅದು ಆ ಸಮಯಕ್ಕೆ ಮಾಹಿತಿಯಾಗಿದ್ದು ಸಾರ್ವಜನಿಕ ಪ್ರಾಧಿಕಾರ ಅದನ್ನು ಹೊಂದಿದೆ ಎಂದರ್ಥ. CIC/WB/A/2006/00839 & 00900, CIC/WB/A/2007/01118 dt: 10-10-2008.

18 ಅಭಿಪ್ರಾಯ ಮತ್ತು ಸಲಹೆಗಳನ್ನೊಳಗೊಂಡಿರುವ ದಾಖಲೆಗೊಂಡ ನಮೂನೆಯಲ್ಲಿರುವ ಯಾವುದೇ ಮಾಹಿತಿ ಪಡೆಯಲರ್ಹ ಇದು ದಾಖಲೆಗಳು ಅಂದರೆ ಒಂದು ಕಡತದ ಮೇಲೆ ನೀಡಿದ ಅಭಿಪ್ರಾಯ ಮತ್ತು ಸಲಹೆಯನ್ನೊಳಗೊಂಡ ದಾಖಲೆ ಅಂದರೆ ಕಡತ ಟಿಪ್ಪಣಿಯನ್ನೊಳಗೊಂಡ ಇದು ಸಾರ್ವಜನಿಕ ಮಾಹಿತಿ ಅಧಿಕಾರಿಯು ತಾನು ವೈಯಕ್ತಿಕವಾಗಿ ಹೊಂದಿದ ಅಭಿಪ್ರಾಯ ಅಥವಾ ಸಲಹೆ ನೀಡುವುದು ಅಥವಾ ಒಂದು ವಿಷಯದ ಕುರಿತಾಗಿ ಸೃಷ್ಟಿಸಿದ ಮಾಹಿತಿಯನ್ನು ನೀಡುವದೆಂದರ್ಥವಲ್ಲ. CIC/WB/A/2009/000216 dt: 26-02-2009.

19 ವಿಷಯ ಸಾಮಗ್ರಿ ರೂಪದಲ್ಲಿರುವ ಮಾಹಿತಿ ಮಾತ್ರ ಪೂರೈಸಬಹುದಾಗಿದೆ. CIC/WB/A/2007/00556 dt:24-7-2007.

20 ಮಾಹಿತಿ ಹಕ್ಕು ಕಾಯ್ದೆ 2005ಕ್ಕೆ ಕುರಿತಾದ ಕಾನೂನು ವಿವಾದಾಂಶದ ಅರ್ಥವಿವರಣೆ ಅಥವಾ ಸ್ಪಷ್ಟೀಕರಣ ನೀಡುವ ಅಧಿಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ ಹೊಂದಿಲ್ಲ. ಮಾಹಿತಿ ಹಕ್ಕು ಕಾಯ್ದೆ 2005 ಕೇವಲ ವಿಷಯ ಸಾಮಗ್ರಿ ರೂಪದಲ್ಲಿರುವ ಮಾಹಿತಿಯನ್ನೊಳಗೊಂಡಿದೆ. CIC/WB/C/2009/000140 dt:19-02-2009.

21 ವೈಯಕ್ತಿಕ ಅಭಿಪ್ರಾಯ ದಾಖಲಾಗದ್ದರಿಂದ ಮಾಹಿತಿಯಲ್ಲ. CIC/WB/C/2006/00294 dt:26-12-2006.

Scanned by CamScanner

22 ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಡಿಯಲ್ಲಿ ಯಾವುದೇ ಖಾಸಗಿ ನಿಕಾಯದಿಂದ ಗ್ರಹಿಸಬಹುದಾದ ಮಾಹಿತಿಯನ್ನು ಸಾರ್ವಜನಿಕ ಪ್ರಾಧಿಕಾರ ಹೊಂದಿದ್ದಲ್ಲಿ ಈ ಮಾಹಿತಿಯನ್ನು ನೀಡಬಹುದಾಗಿದೆ. ಆದರೆ ಒಂದು ವೇಳೆ ಸಾರ್ವಜನಿಕ . ಪ್ರಾಧಿಕಾರ ಈ ಮಾಹಿತಿಯನ್ನು ಹೊಂದಿರದಿದ್ದಲ್ಲಿ, ಆ ಖಾಸಗಿ ನಿಖಾಯದಿಂದ ಮಾಹಿತಿ ಸಂಗ್ರಹಿಸಿ ಅರ್ಜಿದಾರರಿಗೆ ಪೂರೈಸಬೇಕೆಂಬುದಿಲ್ಲ. CIC/SM/A/2009/00731 dt:24-12-2008.

23 ಒಂದು ಖಾಸಗಿ ನಿಕಾಯಕ್ಕೆ ಸಂಬಂಧಿಸಿದ ಮಾಹಿತಿಯು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದು ಇತರ ಕಾನೂನಿನಡಿಯಲ್ಲಿ ಸಾರ್ವಜನಿಕ ಪ್ರಾಧಿಕಾರವು ಗ್ರಹಿಸಬಹುದಾಗಿದಲ್ಲಿ ಅದೇ ಮಾಹಿತಿಯನ್ನು ನೀಡಬಹುದಾಗಿದ್ದು, ಒಂದು ವೇಳೆ ಸಾರ್ವಜನಿಕ ಪ್ರಾಧಿಕಾರವು ಖಾಸಗಿ ನಿಕಾಯದಿಂದ ಮಾಹಿತಿ ಗ್ರಹಿಸುವ ಕುರಿತಾಗಿ ಯಾವುದೇ ಇತರ ಕಾಊನು ಅಧಿಕಾರ ನೀಡದೆ ಇದ್ದಲ್ಲಿ ಆ ಖಾಸಗಿ ನಿಕಾಯಕ್ಕೆ ಸಂಬಂಧಿಸಿದ ಮಾಹಿತಿಯನ್ನು ಅರ್ಜಿದಾರ ಕೋರಲು ಅವಕಾಶವಿಲ್ಲ. CIC/AT/A/2007/00389 dt:27-12-2007.

24 ಒಂದು ಆದೇಶಕ್ಕೆ ಕಾರಣಗಳು ಅಥವಾ ಏಕೆ ಒಂದು ನಿರ್ಧಾರ ಕೈಗೊಳ್ಳಲಾಯಿತು. ಅಥವಾ ಸಾರ್ವಜನಿಕ ಪ್ರಾಧಿಕಾರ ಮುಂದೆ ಯಾವ ಕ್ರಮಕೈಗೊಳ್ಳಬಹುದು ಅಥವಾ ಒಂದು ನಿರ್ಧಿಷ್ಟ ನಿಯಮಗಳು ಅನ್ವಯವಾಗುತ್ತವೆಯೋ ಇಲ್ಲವೋ ಎಂದು ಕೇಳುವ ಪ್ರಶ್ನೆಗಳು ಮಾಹಿತಿ ಹಕ್ಕಿನ ವ್ಯಾಪ್ತಿ ಮೀರಿವೆ. CIC/CP10/2006/38 Oct 26th 2006.

25 ಮಾಹಿತಿ ಹಕ್ಕು ಸದ್ಯಕ್ಕೆ ಅನುಷ್ಠಾನಗೊಳ್ಳುತ್ತಿರುವ ಕಾರ್ಯದ ಪರಿವೀಕ್ಷಣೆಯ ಹಕ್ಕನ್ನು ನೀಡಿಲ್ಲ. ಅನುಷ್ಠಾನಗೊಂಡ ಕಾರ್ಯದ ಫಲಿತಾಂಶ ಮಾಹಿತಿ ಆಗಿದೆ. ಈ ಕಾರಣಕ್ಕಾಗಿ ಬರವಣಿಗೆಯಲ್ಲಿನ ಬೋಧನೆ ಅಥವಾ ಬೋಧಕೇತರ ಸಮಯದಲ್ಲಿ ಬೋಧನಾ ಕೊಠಡಿಗಳ ಪರಿವೀಕ್ಷಣೆಗೆ ಅವಕಾಶವಿದೆ ಹೊರತಾಗಿ ಬೋಧನೆ ನಡೆದ ಸಮಯದಲ್ಲಿ ಬೋಧನೆಯ ಪರಿವೀಕ್ಷಣೆಗೆ ಅವಕಾಶವಿಲ್ಲ. CIC/WB/A/2007/00719 & 756 dt:15-5-2007 & 17-5-2007.

26 ಮಾಹಿತಿ ಎಂದರೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಡಿಯಲ್ಲಿ ಯಾವುದೇ ಖಾಸಗಿ ನಿಕಾಯಕ್ಕೆ ಸಂಬಂದಿಸಿದ ಮಾಹಿತಿಯನ್ನು ಸಾರ್ವಜನಿಕ ಪ್ರಾಧಿಕಾರ ಪಡೆದುಕೊಳ್ಳುವುದಾಗಿದೆ. ಈಗಾಗಲೇ ಸಾರ್ವಜನಿಕ ಪ್ರಾಧಿಕಾರ ಹೊಂದಿದ ಮಾಹಿತಿಯನ್ನಷ್ಟೇ ಇದು ಒಳಗೊಂಡಿಲ್ಲ. ಆದರೆ ಕೇವಲ ಮಾಹಿತಿ ಹಕ್ಕು ಅಲ್ಲದೇ ಸಾರ್ವಜನಿಕ ಪ್ರಾಧಿಕಾರ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕನೂನಿನಡಿಯಲ್ಲಿ ಯಾವುದೇ ಖಾಸಗಿ ನಿಕಾಯಕ್ಕೆ ಸಂಬಂಧಿಸಿದ ಮಾಹಿತಿಯು ಸಹ ಮಾಹಿತಿ ಆಗಿದೆ. ದೆಹಲಿ ವಿದ್ಯುತ್ ನಿಯಂತ್ರಣ ಆಯೋಗ ಯಾವುದೇ ಇತರ ಕಾನೂನಿನ ಅಡಿಯಲ್ಲಿ ವಿದ್ಯುತ್ ಕಾಯ್ದೆಯನ್ನೊಳಗೊಂಡು BSES ತಾನು ಖಾಸಗಿ ನಿಕಾಯವೆಂದು ಮಾಹಿತಿ ಹಕ್ಕು ಕಾಯ್ದೆಯಡಿ ತಾನು ಸಾರ್ವಜನಿಕ ಪ್ರಾಧಿಕಾರವಲ್ಲವೆಂದು ಪ್ರತಿಪಾದಿಸಿದ್ದು ಸಮಂಜಸವಲ್ಲ. CIC/WB/A/2006/00314 dt:13-6-2006.

27 ಕೇವಲ ದಾಖಲೆಗೊಂಡ ಅಭಿಪ್ರಾಯವನ್ನು ಮಾತ್ರ ನೀಡಬಹುದಾಗಿದ್ದು, ಒಂದು ವಿಶಿಷ್ಟ ವಿಷಯದ ಬಗ್ಗೆ ದಾಖಲೆಗೊಳ್ಳಲು ಅಭಿಪ್ರಾಯದ ಕುರಿತಾದ ಮಾಹಿತಿ ಕೋರಿದಲ್ಲಿ, ಸಾರ್ವಜನಿಕ ಮಾಹಿತಿ

Scanned by CamScanner

ಅಧಿಕಾರಿಯು ಅಂತಹ ಮಾಹಿತಿಯು ದಾಖಲೆಗೊಂಡಿಲ್ಲವೆಂದು ಅರ್ಜಿದಾರನಿಗೆ ತಿಳಿಸತಕ್ಕದ್ದು. CIC/WB/A/2007/00329 dt:27-02-2007.

28 ಸಾರ್ವಜನಿಕ ಪ್ರಾಧಿಕಾರ ತನ್ನ ಬಳಿಉ ಲಭ್ಯವಿದ್ದ ಮಾಹಿತಿಯನ್ನು ಮಾತ್ರ ಪೂರೈಸಬಹುದಾಗಿದ್ದು ಅದನ್ನು ಪುರೈಸಲು ಹೊಸ ಮಾಹಿತಿಯನ್ನೇ ಸೃಷ್ಟಿಸುವುದು ಸಾರ್ವಜನಿಕ ಪ್ರಾಧಿಕಾರದ ಕರ್ತವ್ಯವಲ್ಲ. ವಿಚಾರಣೆಯ ನಂತರ ಮಾಹಿತಿ ಸಿದ್ಧಪಡಿಸುವುದು ಮಾಹಿತಿಯಲ್ಲ. ಆದರೆ ಲಭ್ಯವಿದ್ದ ದಾಖಲೆಯಷ್ಟೇ ಮಾಹಿತಿಯಾಗಿದೆ. ಅದರಂತೆ ಯಾವುದೇ ವಿದ್ಯುನ್ಮಾನ ರೂಪದಲ್ಲಿರುವ ದತ್ತಾಂಶ ಮಾಹಿತಿಯಾಗಿದ್ದು ಅದನ್ನು ಸಂಪೂರ್ಣವಾಗಿ ಅಥವಾ ಭಾಗಶಃ ಪೂರೈಸಬಹುದಾಗಿದ್ದು ದತ್ತಾಂಶದ ವಿಶ್ಲೇಷಣೆ ಅಥವಾ ಕೆಲ ನಿರ್ಣಯಗಳನ್ನು ಸಂಗ್ರಹಿಸಿ ನೀಡುವುದಕ್ಕೆ ಅವಕಾಶವಿಲ್ಲ. ಅದರಂತೆ ಪ್ರಶ್ನೆಗೆ ಉತ್ತರಿಸುವುದು ಅಥವಾ ಸಲಹೆ ನೀಡುವುದು ಅಥವಾ ಸೂಚನೆ ನೀಡುವುದು ಮಾಹಿತಿ ಹಕ್ಕಿನ ವ್ಯಾಪ್ತಿ ಮೀರಿದೆ. CIC/WB/A/2007/00329 dt:27-02-2007.

29 ನ್ಯಾಯಾದೀಶ ತಾನು ನೀಡುವ ತೀರ್ಪು ಅಥವಾ ಆದೇಶದ ಮೂಲಕವೇ ಸಂಭಾಷಿಸುತ್ತಾರೆ. ನ್ಯಾಯಾಧೀಶ ಹೊರಡಿಸಿದ ತೀರ್ಪು ಅಥವಾ ಆದೇಶದಿಂದ ಬಾಹಿತನಾದ ಪಕ್ಷಗಾರನು ನ್ಯಾಯಸಮ್ಮತವಾದ ಪದ್ಧತಿಗಳ ಮೂಲಕ ಅಥವಾ ಮೇಲ್ಮನವಿ ಅಥವಾ ಪರಿಷ್ಕೃರಣದ ಮೂಲಕ ಪರಿಹಾರ ಕಂಡುಕೊಳ್ಳಬಹುದಾಗಿದ್ದು, ಪಕ್ಷಗಾರನು ನ್ಯಾಯಾಧೀಶನು ಒಂದು ವಿಶಿಷ್ಟ ಆದೇಶ ಅಥವಾ ನಿರ್ಣಯ ಏಕೆ ಮತ್ತು ಯಾವ ಕಾರಣಗಳಿಗಾಗಿ ಕೈಗೊಂಡಿದ್ದಾರೆಂದು ಮಾಹಿತಿ ಕೋರಲು ಅವಕಾಶವಿಲ್ಲ.CIC/WB/A/2009/000595 dt:28-5-2009.

30 ಮಾಹಿತಿ ಹಕ್ಕು ಕಾಯ್ದೆ 2005ರಡಿ ಸಾರ್ವಜನಿಕ ಮಾಹಿತಿ ಅಧಿಕಾರಿಯು ಮಾಹಿತಿ ಪೂರೈಸುವ ಹೊರತಾಗಿ ಮಾಹಿತಿ ಸಿದ್ಧಪಡಿಸುವನೆಂದರ್ಥವಲ್ಲ. ಒಂದು ವಿಷಯವು ನಿರ್ಣಯಗೊಂಡಾಗ ಅವನು ಅ ಆದೇಶವನ್ನು ಸಂಭಾಷಿಸಬಹುದು, ಹೊರತಾಗಿ ಆ ವಿಷಯ ಇನ್ನು ನಿರ್ಣಯವಾಗಬೇಕಾದಾಗ, ತನ್ನ ನಿರ್ಣಯ ನೀಡಲು ಅವಕಾಶವಿಲ್ಲ. ಅದರಂತೆ ಅವನು ಒಂದು ಆದೇಶವನ್ನು ಪ್ರತಿಪಾದಿಸುವುದಕ್ಕಾಗಲಿ ಅಥವಾ ಹೇಗೆ ಒಂದು ಹೊರಡಿಸಿದ ಆದೇಶವು ಸೂಕ್ತ ಮತ್ತು ಸರಿಯೆಂಬುದಕ್ಕೆ ಕಾರಣಗಳನ್ನು ನೀಡಲು ಬದ್ಧನಾಗಿಲ್ಲ. CIC/AA/A/2009/300 dt:13-7-2009.

Scanned by CamScanner

## ಮಾಹಿತಿ ಹಕ್ಕು (Right to Information) S-2(j)ಇವುಗಳನ್ನು ಒಳಗೊಂಡಿದೆ:-

ಯಾವುದೇ ಸಾರ್ವಜನಿಕ ಪ್ರಾಧಿಕಾರದ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ

1 ಕೆಲಸದ, ದಸ್ತಾವೇಜುಗಳ, ದಾಖಲೆಗಳ ಪರಿವೀಕ್ಷಣೆ ಮಾಡುವ

2 ದಸ್ತಾವೇಜುಗಳ, ಅಥವಾ ದಾಖಲೆಗಳ ಟಿಪ್ಪಣಿಗಳನ್ನು, ಉದ್ಧೃತ ಭಾಗಗಳನ್ನು ಅಥವಾ ಪ್ರಮಾಣೀಕೃತ ಪ್ರತಿಗಳನ್ನು ತೆಗೆದುಕೊಳ್ಳುವ

3 ವಿಷಯ ಸಾಮಗ್ರಿಯ ಪ್ರಮಾಣೀಕೃತ ಮಾದರಿಗಳನ್ನು ಪಡೆದುಕೊಳ್ಳುವ,

4 ಡಿಸ್ಕೆಟ್, ಫ್ಲಾಪಿ, ಟೇಪು, ವಿಡಿಯೋ ಕ್ಯಾಸೆಟ್‌ಗಳ ರೂಪದಲ್ಲಿ ಅಥವಾ ಇತರ ವಿದ್ಯುನ್ಮಾನ ವಿಧಾನದಲ್ಲಿ ಸಂಗ್ರಹಿಸಿಟ್ಟಿದ್ದರೆ ಅದರ ಮುದ್ರಿತ ಪ್ರತಿ ಪಡೆದುಕೊಳ್ಳುವುದಾಗಿದೆ.

5 ಸಂಸತ್ತು ಅಥವಾ ರಾಜ್ಯ ವಿಧಾನ ಮಂಡಲಕ್ಕೆ ನಿರಾಕರಿಸಲಾಗದಂಥ ಮಾಹಿತಿಯನ್ನು ನಿರಾಕರಿಸಲಾಗುವುದಿಲ್ಲ.

6 ಸಾರ್ವಜನಿಕ ಪ್ರಾಧಿಕಾರದ ಸಂಪನ್ಮೂಲಗಳು ಅತಿ ಹೆಚ್ಚಿನ ಪ್ರಮಾಣದಲ್ಲಿ ಬಳಕೆಯಾಗುವಂತಿದ್ದರೆ ಅಥವಾ ದಾಖಲೆಯ ಸುರಕ್ಷತೆಗೆ ಅಥವಾ ಸಂರಕ್ಷಣೆಗೆ ಹಾನಿಯುಂಟಾಗುತ್ತಿದ್ದರೆ ಅಂಥ ಮಾಹಿತಿ ಒದಗಿಸತಕ್ಕದ್ದಲ್ಲ. 157/IC(A)/2006/Aug 2006.

7 ಸಾರ್ವಜನಿಕ ಪ್ರಾಧಿಕಾರ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಮಾಹಿತಿಯನ್ನು ನೀಡತಕ್ಕದ್ದು.

8 ಮಾಹಿತಿಯನ್ನು ಸೃಷ್ಟಿಸುವುದಾಗಲಿ, ಅರ್ಥವಿವರಣೆ ನೀಡುವುದಾಗಲಿ, ಅರ್ಜಿದಾರ ಕೇಳಿದ ಪ್ರಶ್ನೆಗಳನ್ನು ಪರಿಹರಿಸುವ ಅಥವಾ ಪೂರ್ವಕಲ್ಪಿತ ಪ್ರಶ್ನೆಗಳಿಗೆ ಪ್ರತ್ಯುತ್ತರ ನೀಡಲು ಅವಕಾಶವಿಲ್ಲ.

## ನಿರ್ವಹಣೆ

1 ಸಂಪೂರ್ಣಗೊಂಡ ಅಥವಾ ಸಂಪೂರ್ಣಗೊಳ್ಳುತ್ತಿರುವ ಕೆಲಸಗಳ ವಿಷಯ ಸಾಮಗ್ರಿಯನ್ನು ಪೂರೈಸಬಹುದಾಗಿದೆ. CIC/WB/A/00259,260,261 dt:22nd May 2006.

2 ಅರ್ಜಿದಾರ ಪಡೆದುಕೊಂಡ ಪ್ರಮಾಣೀಕೃತ ವಿಷಯ ಸಾಮಗ್ರಿಯನ್ನು ತಾನು ಆಯ್ಕೆಮಾಡುವ ಯಾವುದೇ ಪ್ರಯೋಗಾಲಯಕ್ಕೆ ಪರೀಕ್ಷೆಗಾಗಿ ಸ್ವತಃ ಕೊಂಡೊಯ್ಯಬಹುದೆ ವಿನಹಃ ಸಾರ್ವಜನಿಕ ಪ್ರಾಧಿಕಾರಕ್ಕೆ ಇದನ್ನು ಮಾಡುವಂತೆ ಕೋರಲು ಅವಕಾಶವಿಲ್ಲ. CIC/WB/A/2600/00290-291 dt:30th Nov 2006.

3 ಮಾಹಿತಿಯನ್ನು ಭಾರತದ ನಾಗರಿಕರಿಗೆ ನೀಡತಕ್ಕದ್ದು. ಕಾರ್ಪೋರೇಶನ್, ಅಸೋಸಿಯೆಷನ್, ಕಂಪನಿ ಇತ್ಯಾದಿ ಕಾನೂನು ಅಸ್ಥಿತ್ವವುಳ್ಳ ವ್ಯಕ್ತಿಗೆ ಮಾಹಿತಿ ನೀಡಲಾಗುವುದಿಲ್ಲ. CIC/OK/A/2006/00121-27th June 2006 ಇವುಗಳ ನೌಕರರು ಅಥವಾ ಕಚೇರಿ ಸಿಬ್ಬಂದಿ ತಮ್ಮ ಹೆಸರನ್ನು ನೀಡಿದಲ್ಲಿ ಮತ್ತು ಅವರು ಭಾರತದ ನಾಗರೀಕರಾಗಿದ್ದಲ್ಲಿ ಮಾಹಿತಿ ನೀಡಬಹುದು. 139/ICPB/2006 25-10-2006, CIC/MA/A/2006/0002 27th June 2006, CIC/MA/A/2006/00000 150,19-6-2006.

4 ನಾಗರೀಕರು ಮಾತ್ರ ಮಾಹಿತಿ ಕೋರಬಹುದು ಆದರೆ ಕಂಪನಿ, ಸಂಸ್ಥೆಗಗಳು ಮಾಹಿತಿ ಕೋರಲು ಅವಕಾಶವಿಲ್ಲ. CIC/AT/A/2006/00443 dt:13th Dec 2006.

Scanned by CamScanner

5 ಒಂದು ಸಂಸ್ಥೆಯ ಕಾರ್ಯದರ್ಶಿಯು ನಾಗರೀಕನಲ್ಲ. ಆದ್ದರಿಂದ ಮಾಹಿತಿ ಕೋರಲು ಅಥವಾ ಅವರಿಗೆ ಮಾಹಿತಿ ಪೂರೈಸಲು ಅವಕಾಶವಿಲ್ಲ. CIC/MA/A/2006/00621 dt:27th Sep 2006.

6 ಅರ್ಜಿದಾರ ತನ್ನ ಹೆಸರನ್ನು ನಮೂದಿಸಿ ವಿಳಾಸ ಮಾತ್ರ ಸರ್ಕಾರೇತರ ಸಂಸ್ಥೆಯದ್ದನ್ನು ನೀಡಿದ್ದಲ್ಲಿ ಮಾಹಿತಿ ನೀಡಬಹುದು. CIC/AT/A/2006/00662 dt:6Mar 2007.

7 ಮಾಹಿತಿಯ ವಿದ್ಯುನ್ಮಾನ ರೂಪದಲ್ಲಿ ಲಭ್ಯವಿಲ್ಲದಿದ್ದರೆ ಅದನ್ನು ಅರ್ಜಿದಾರರ ಸಲುವಾಗಿ ಸಿದ್ಧಪಡಿಸುವ ಅಗತ್ಯತೆ ಇಲ್ಲ. CIC/WB/A/2006/00379,00380,00381- 21-12-2006, 285/IC (A) / 2006 - 20-9-2006, 225/IC (A) /2006 31-8-2006.

8 ನಿಗದಿತ ನಮೂನೆಯಲ್ಲಿ ಮಾಹಿತಿಯು ಲಭ್ಯವಿಲ್ಲದಿದ್ದರೆ ಅರ್ಜಿದಾರನು ಇಚ್ಛಿಸಿದಲ್ಲಿ ಮೂಲ ದಾಖಲೆಯನ್ನು ಕಛೇರಿಯಲ್ಲಿ ಪರಿವೀಕ್ಷಣೆಗೆ ನೀಡತಕ್ಕದ್ದು ಮತ್ತು ಅರ್ಜಿದಾರರು ಕೋರಿದಲ್ಲಿ ಮೂಲ ದಾಖಲೆಯ ಪ್ರತಿಗಳನ್ನು ಒದಗಿಸತಕ್ಕದ್ದು. 10/1/2005 CIC 25th Feb 2006.

9 ಪರಿವೀಕ್ಷಣೆಗೆ ನೀಡಿದ ದಾಖಲೆ / ವಿಶೇಷ ಸಾಮಗ್ರಿ ವಿಡಿಯೋ ಗ್ರಾಫಿಗೆ ಅವಕಾಶವಿದೆ. CIC/WB/A/2006/00144 3rd August 2006.

10 ಸಾರ್ವಜನಿಕ ಪ್ರಾಧಿಕಾರದ ವಶದಲ್ಲಿರುವ ಮಾಹಿತಿಯು ಇಂಗ್ಲೀಷಿನಲ್ಲಿದ್ದು ಅರ್ಜಿದಾರನಿಗೆ ಆ ಭಾಷೆ ಬಗ್ಗೆ ಜ್ಞಾನವಿಲ್ಲದ್ದರಿಂದ ದಾಖಲೆಗಳನ್ನು ಪರಿವೀಕ್ಷಣೆ ಮಾಡಲು ಆಗದ್ದರಿಂದ ಇಂಗ್ಲೀಷಿನಲ್ಲಿ ಪರಿಣತಿ ಹೊಂದಿದ ನ್ಯಾಯವಾದಿ ಅಥವಾ ಇತರರ ಸಹಾಯವನ್ನು ದಾಖಲೆಗಳ ಪರಿವೀಕ್ಷಣೆಗಾಗಿ ಪಡೆಯಬಹುದು. ತಿರಸ್ಕಾರವು ಮಾಹಿತಿಯನ್ನು ನೀಡದಂತೆ ತಡೆಹಿಡಿದಂತಾಗುತ್ತದೆ. W.p (C) No.8228 of 2007 Dt:16-11-2007, Suresh Chandra Gupta V/s Police Deputy Commissioner and others (Delhi HC)

11 ದಾಖಲೆಯು ಕಾಯ್ದಿರಿಸುವಿಕೆಯ ಅವಧಿ ಮೀರಿದ ನಂತರ ನಾಶಪಡಿಸಿದ್ದಲ್ಲಿ, ಮಾಹಿತಿಯು ಲಭ್ಯವಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಈ ಮಾಹಿತಿಯನ್ನು ಪೂರೈಸಲು ಅಸಾಧ್ಯವಾಗಿದ್ದು, ಅಸ್ಥಿತ್ವದಲ್ಲಿರದ ಮಾಹಿತಿಯನ್ನು ಪೂರೈಸಲೇ ಬೇಕೆಂಬ ಹೊಣೆಗಾರಿಕೆ ಸಾರ್ವಜನಿಕ ಪ್ರಾಧಿಕಾರದ ಮೇಲಿಲ್ಲ. CIC/AT/A/2006 20th March 2006.

12 ಕೋರಿದ ದಾಖಲೆಯು ಶೋಧನೆಯ ಎಲ್ಲ ಪ್ರಯತ್ನದ ನಂತರವು ದೊರೆಯದಿದ್ದಾಗ, ಅರ್ಜಿದಾರರಿಗೆ ಸದನ್ನು ಕಾರಣಗಳ ಸಹಿತ ತಿಳಿಸತಕ್ಕದ್ದು. CIC/AT/A/2006/00073 4th July 2006.

13 ಗೆಜೇಟ್ ನಲ್ಲಿ ಪ್ರಕಟಗೊಂಡ ಮಾಹಿತಿಯನ್ನು ಕೋರಿದಲ್ಲಿ ಅದನ್ನು ಪೂರೈಸತಕ್ಕದ್ದು. FNo.PBA/06/136 4th October 2006.

14 ಪ್ರಶ್ನಾವಳಿಗಳ ಮೂಲಕ ಅಭಿಪ್ರಾಯ ಪಡೆಯಲು ಅವಕಾಶವಿಲ್ಲ. CIC/OK/A/2006/00049 2nd May 2006.

15 ನಾಗರಿಕನು ಅರ್ಥ ಮಾಡಿಕೊಳ್ಳುವ ಭಾಷೆಯಲ್ಲಿ ಮಾಹಿತಿಯನ್ನು ಪೂರೈಸತಕ್ಕದ್ದು. ಅರ್ಜಿದಾರ ಹಿಂದಿಯಲ್ಲಿ ಮಾಹಿತಿ ಕೋರಿದ್ದು ಉತ್ತರಖಂಡ ರಾಜ್ಯ ಭಾಷೆ ಹಿಂದಿಯಾಗಿದ್ದು ಇಂಗ್ಲೀಷಿನಲ್ಲಿ ಮಾಹಿತಿ ಪೂರೈಸಿದ್ದು ಸಮಂಜಸ ಅಲ್ಲ. WP No.2130 of 2009 Dt:27th March 2010 State Consumer Grievence RedresalCommission V/s SIC and ors.

Scanned by CamScanner

16 ಕಾಯ್ದಿರಿಸುವಿಕೆ ಅವಧಿ ಮುಗಿದು ಹೋದ ನಂತರ ನಾಶಪಡಿಸಿದ ದಾಖಲೆಗಳನ್ನು ಪೂರೈಸಲಾಗುವುದಿಲ್ಲ. CIC/ AT/2006 23rd Marcht 2006.

17 ಕೋರಿದ ಮಾಹಿತಿಯಲ್ಲಿ ನಿಖರವಾದ ಸ್ಪಷ್ಟತೆ ಇರತಕ್ಕದ್ದು. CIC/OK/A/2006/00260 dt 2nd Jan 2007.

18 ಲಭ್ಯವಿದ್ದ ಮಾದರಿ/ನಮೂನೆಯಲ್ಲೇ ಮಾಹಿತಿ ಪೂರೈಸತಕ್ಕದ್ದು. 10/01/2005 CIC 25th Feb 2006.

19 ಮಾಹಿತಿ ಹಕ್ಕಿನಡಿ ಕೇವಲ ವ್ಯಕ್ತಿಗಳು ವೈಯಕ್ತಿಕ ಸಾಮರ್ಥ್ಯದಿಂದ ಅರ್ಜಿಸಲ್ಲಿಸಬಹುದು. CIC/OK/A/2006/00121 27th June 2006.

20 ಸಂಸ್ಥೆ ಮಾಹಿತಿ ಹಕ್ಕಿನಡಿ ಅರ್ಜಿದಾರನಲ್ಲ. 560/IC/ 2007/ 22nd Feb 2007.

21 ದಾಖಲೆಗಳನ್ನು ದಾಖಲೆ ನಿರ್ವಹಣಾ ಅನುಸೂಚಿ ಪ್ರಕಾರ ಕಾಯ್ದಿರಿಸಿಕೊಳ್ಳತಕ್ಕದ್ದು ಮತ್ತು ಅನಿಯಮಿತ ಅವಧಿಯವರೆಗೆ ಕಾಯ್ದಿರಿಸಿಕೊಳ್ಳತಕ್ಕುದಲ್ಲ. KIC 244 COM 2006.

22 ಒಂದು ಕಡತ ದಾಖಲೆಯಲ್ಲಿ ಸೃಷ್ಟಿಸಿದ ಮಾಹಿತಿಯು ಅದನ್ನು ನಾಶಪಡಿಸಿದ ನಂತರವೂ ಅಥವಾ ಪತ್ರದಲ್ಲಿ ಜೀವಂತವಾಗಿದ್ದು ಅದನ್ನು ಪೂರೈಸಬಹುದು. CIC/AT/C/2006/00111, 20th Nov 2006, CIC/ AD/A2009/001084 9th Sep 2009.

Scanned by CamScanner

## ಬಹಿರಂಗ ಪಡಿಸುವಿಕೆಯಿಂದ ವಿನಾಯ್ತಿ (Exemption from Disclosure) 8(1)

ಭಾರತದ ಸಾರ್ವಭೌಮತ್ವ,ಏಕತೆ,ಭದ್ರತೆ,ಕಾರ್ಯತಂತ್ರ,ವೈಜ್ಞಾನಿಕ ಅಥವಾ ಆರ್ಥಿಕ ಹಿತಾಸಕ್ತಿಗಳು,ವಿದೇಶದೊಂದಿಗಿನ ಸಂಬಂಧ ಇವುಗಳ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವುದು ಅಥವಾ ಒಂದುಅಪರಾಧಕ್ಕೆ ಪ್ರೇರಣೆನೀಡುವುದೋ ಅಂಥ ಮಾಹಿತಿ.8 (1) (ಎ)

## ನಿರ್ವಹಣೆ

1 ಕಳ್ಳ ಸಾಗಣೆ ಮಾಡಿದ ವಸ್ತುಗಳನ್ನು ವಶಪಡಿಸಿಕೊಳ್ಳುವಲ್ಲಿ ಪಾಲ್ಗೊಂಡ ಅಧಿಕಾರಿಗಳ ಹೆಸರು, ಮಾಹಿತಿ ನೀಡಿದವರ ಹೆಸರು ವಿಳಾಸ ಇದಕ್ಕೆ ಸಂಬಂಧಿಸಿದ ಕಡತ ಟಿಪ್ಪಣಿಯು, ಕಳ್ಳ ಸಾಗಾಣಿಕೆ ಕುರಿತಾದ ಮಾಹಿತಿಯು ಭಾರತದ ಆರ್ಥಿಕ ಹಿತಾಸಕ್ತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರುವುದರಿಂದ, ಬಹಿರಂಗಪಡಿಸುವುದರಿಂದ ವಿನಾಯಿತಿ ಪಡೆದಿದೆ. 298/IC(A) /2006 21st Sept 2006.

2 ವಿಶೇಷವಾಗಿ ಭಾರತದ ಪೂರ್ವೋತ್ತರ ಭಾಗದ ಸರಹದ್ದಿನ ಕುರಿತಾಗಿ ಭಾರತ ಚೀನಾ ಉಭಯ ದೇಶಗಳ ನಡುವಿನ ವಿವಾದಾಂಶ ಇನ್ನೂ ಜೀವಂತವಾಗಿದ್ದು, ಅವುಗಳ ನಡುವೆ ಮಾತುಕಥೆ ಮುನ್ನಡದಿದ್ದು, ಭಾರತ–ಚೀನ ನಡುವೆ 1962 ರಲ್ಲಿ ಯುದ್ಧ ನಡೆಯಲು ಕಾರಣವಾದ ಅಂಶಗಳನ್ನೊಳಗೊಂಡ ಹೆಂಡರಸನ್ ಬ್ರುಕ್ಸ್ ವರದಿಯು ರಾಷ್ಟ್ರದ ಆಂತರಿಕ ಮತ್ತು ಬಾಹ್ಯ ಭದ್ರತೆಯ ವಿಷಯ್ವನ್ನೊಳಗೊಂಡಿರುವುದರಿಂದ, ಪ್ರತ್ಯೇಕಿಸುವಿಕೆ ಪ್ರಕರಣ 10(1)ರ ಅನ್ವಯಿಕೆ ನಂತರವು ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. CIC/WB/C/2007/00500 dt:26-10-2007.

3 ಪ್ರೋಟೋಟೈಪ್ ಫಾಸ್ಟ ಬ್ರೀಡರ್ ರಿಯಾಕ್ಟರನ ಮಧ್ಯಭಾಗದ ಬನಾವಣೆ ವೆಚ್ಚ, ಪ್ರತಿಯೊಂದು ಮಧ್ಯಭಾಗ ಮತ್ತು ಹೊದಿಕೆಯನ್ನು ಒಟ್ಟುಗೂಡಿಸುವ ವೆಚ್ಚ, ವಾರ್ಷಿಕ ತ್ಯಾಜ್ಯ ನಿರ್ವಹಣಾ ವೆಚ್ಚ, ಖರ್ಚು ಮಾಡಲಾದ ಇಂಧನದ ಮರುಪ್ರತಿಕ್ರಿಯೆ ವೆಚ್ಚ, ನೂತನ ಇಂಧನದ ಮತ್ತು ಹೊದಿಕೆಯನ್ನು ರಿಯಾಕ್ಟರನ ವರೆಗೆ ಸಾಗಣೆ ಮಾಡುವ ವೆಚ್ಚ, ಪ್ಲೋಟೋನಿಯಮ ಮತ್ತು ಡಿಪ್ಲಿಟೆಡ್ ಯುರೆನಿಯಂನ್ನು ಇಂಧನ ಮಾರ್ಪಾಡು ಘಟಕದ ವರೆಗೆ ಸಾಗಣೆ ಮಾಡುವ ವೆಚ್ಚ, ಇಂಧನ ಮಾರ್ಪಾಡು ಮಾಡುವುದಕ್ಕಿಂತ ಮುನ್ನ ಅಮೇರಿಯಂ ಮತ್ತು ಪ್ಲೋಟೋನಿಯಂ ತೆಗೆಯಲು ತಗಲುವ ವೆಚ್ಚದ ಕುರಿತಾದ ಮಾಹಿತಿಯು ಶೀಘ್ರಗಾಹಿ ಚಾಲನೆಯಲ್ಲಿರುವ ಯೋಜನೆ ಮೇಲೆ ಕಾಣದ ಪರಿಣಾಮ ಬೀರುವುದರಿಂದ ಬಹಿರಂಗಪಡಿಸುವುದರಿಂದ ವಿನಾಯಿತಿ ಪಡೆದಿದೆ. CIC/WB/A/2006/00878 dt:29-11-2006.

4 ಮಾಹಿತಿ ಹಕ್ಕು ಅಧಿನಿಯಮ 2005ರ ಪ್ರಕರಣ 8 ಮತ್ತು 9ರಡಿ ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದ ಮಾಹಿತಿಯನ್ನು ಸ್ವಯಂ ವೇದ್ಯವಾಗಿ ಬಹಿರಂಗಪಡಿಸುವ ಇಚ್ಛೆ ಶಾಸಕಾಂಗದಲ್ಲ. ಇಲಾಖಾ ರಕ್ಷಣಾ ಸೂಚನಾ ಕೈಪಿಡಿ ಮತ್ತು ಕೊನೆಯ ದಾಖಲೆಯ ವಿಂಗಡಣೆಯನ್ನು ಬಹಿರಂಗಪಡಿಸುವುದರಿಂದ, ನಾಗರೀಕರು ದೇಶದ ಭದ್ರತಾ ಕಾರ್ಯವೈಖರಿಯನ್ನು ಮತ್ತು ದೇಶದ ಶೀಘ್ರಗಾಹಿ ಮಾಹಿತಿಯನ್ನು ನಿಭಾಯಿಸುವ ವ್ಯಕ್ತಿಗಳ ವಿವರ ತಿಳಿದುಕೊಳ್ಳುವ ಸಂಭವವಿರುವುದರಿಂದ ಈ ಮಾಹಿತಿಯು ಬಹಿರಂಗಪಡಿಸುವಿಕೆಯಿಂದ ವನಾಯಿತಿ ಪಡೆದಿದೆ. CIC/WB/A/2009/000758 dt:14-8-2008.

Scanned by CamScanner

5 ಪ್ರಕರಣ 8(1)ರಡಿ ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆಯದ ದಾಖಲೆಯು, ಭಾರತದ ಸಂವಿಧಾನದ ಪರಿಚ್ಛೇದ 74 ಮತ್ತು ಭಾರತದ ಸಾಕ್ಷ್ಯ ಅಧಿನಿಯಮದ ಪ್ರಕರಣ 123ರಡಿ ವಿನಾಯಿತಿ ಪಡೆದಿದ್ದರು ಸಹಿತ ಅದನ್ನು ಬಹಿರಂಗಪಡಿಸಬಹುದಾಗಿದೆ. CIC/AT/C/2008/00025 dt:27-7-2009, WP.No.15671/2008 (Andhra Pradesh HC)

**ನ್ಯಾಯಾಲಯ ಅಥವಾ ನ್ಯಾಯಾಧೀಕರಣ ಯಾವ ಮಾಹಿತಿ ಪ್ರಕಟಣೆಯನ್ನು ಸ್ಪಷ್ಟ್ವಾಗಿ ನಿಷೇಧಿಸಿದೆಯೊ ಅಥವಾ ಯಾವ ಮಾಹಿತಿ ಬಹಿರಂಗಪಡಿಸುವುದರಿಂದ ನ್ಯಾಯಾಲಯ ನಿಂದನೆಯಾಗಬಹುದೊ ಅಂಥ ಮಾಹಿತಿ. 8 (1) (ಬಿ)**

1. ಪ್ರಕರಣ 8 (1) (ಬಿ) ರಡಿಯಲ್ಲಿನ ವಿನಾಯತಿಯು ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಪ್ರಕರಣಗಳಿಗೆ ಅನ್ವಯಿಸದು ವಿನಾಯತಿಯನ್ನು ವಿಶೇಷವಾಗಿ ನಮೂದಿಸದಿದ್ದರೆ ಮಾಹಿತಿಯನ್ನು ತಿರಸ್ಕರಿಸಲಾಗದು. ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಪ್ರಕರಣಗಳ ಕುರಿತಾದ ಮಾಹಿತಿಯು ಅದು ಬಹಿರಂಗಪಡಿಸುವುದನ್ನು ನಿಷೇದಿಸಲಾಗಿದೆ ಎನ್ನುವ ಆದೇಶವಿಲ್ಲದ ಹೊರತಾಗಿ ಆ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ನ್ಯಾಯಾಂಗ ನಿಂಧನೆಯಾಗುವುದಿಲ್ಲ. CIC/SG/2010/002021/9247 dt:15-10-2010, CIC/SG/2010/000498 dt:29-11-2010, CIC/WB/A/2008/00838/SG/1777 dt:18-2-2009, CIC/OK/C/2007/00205 dt:6-11-2007, CIC/SG/A/2009/002302/4945 dt:25th Sep 2009.

2. ಯಾವ ಕೃತ್ಯದಿಂದ ನ್ಯಾಯಾಂಗ ನಿಂಧನೆಯಾಗುವುದು ಅಥವಾ ಇಲ್ಲ ಎಂದು ನಿರ್ಧರಿಸುವ ಪರೀಕ್ಷೆಯು ಆ ಕೃತ್ಯವು ನ್ಯಾಯಾಧೀಶರ ಕಾರ್ಯವನ್ನು ಅಸಾಧ್ಯ ಅಥವಾ ಅತೀ ಕಠಿಣ ಮಾಡುತ್ತದೆಯೋ ಇಲ್ಲವೋ ಎನ್ನುವುದು. ಒಂದು ವೇಳೆ ಇಲ್ಲವಾದಲ್ಲಿ ಅದು ನ್ಯಾಯಾಂಗ ನಿಂಧನೆಯಾಗುವುದಿಲ್ಲ. CIC/OK/A/2008/00620 12th Mar 2010.

3. ಯಾವ ಮಾಹಿತಿಯನ್ನು ನ್ಯಾಯಾಲಯವು ಸ್ಪಷ್ಟವಾಗಿ ಪ್ರತಿಬಂಧಿಸಿದೆಯೋ ಆ ಮಾಹಿತಿಯಷ್ಟೇ ಬಹಿರಂಗಪಡಿಸುವುದರಿಂದ ವಿನಾಯಿತಿಪಡೆದಿದೆ. CIC/WB/A/2007/00292 dt:24th Feb 2007.

**ಸಂಸತ್ತು ಅಥವಾ ರಾಜ್ಯ ವಿಧನ ಮಂಡಲದ ಹಕ್ಕು ಚ್ಯುತಿ ಉಂಟಾಗುವ ಮಾಹಿತಿ.8 (1) (ಸಿ)**

1. ಸಂಸತ್ತಿನ ಪ್ರಕ್ರಿಯೆ ಪ್ರಕಾರ ಸರ್ಕಾರದ ಇಲಾಖೆಗಳು, ಸಂಸತ್ತಿನ ಸ್ಥಾಯಿ ಸಮಿತಿ ಮಾಡಿದ ಎಲ್ಲಾ ಸಲ್ಲಿಕೆಗಳನ್ನು ರಹಸ್ಯವಾದವುಗಳೆಂದು ಪರಿಗಣಿಸಲಾಗಿದ್ದು, ದಾಖಲೆಗಳು ಮತ್ತು ಇತರ ಸಲ್ಲಿಕೆಗಳು ಸಂಸತ್ತಿನಲ್ಲಿ ಆಸ್ತಿಯಾಗಿದ್ದು, ಸ್ಥಾಯಿ ಸಮಿತಿಯ ಅಧಿಕೃತ ಪರವಾನಿಗೆ ಇಲ್ಲದೆ ಇಲಾಖೆಯು ಈ ದಾಖಲೆಗಳನ್ನು ಮತ್ತು ಇತರ ಸಲ್ಲಿಕೆಗಳನ್ನು ಬಹಿರಂಗಪಡಿಸತಕ್ಕುದಲ್ಲ. CIC/AT/A/2006/00195 25th Sep 2006.
2. ಮಾಹಿತಿ ಹಕ್ಕು ಕಾಯ್ದೆ ಪ್ರಕರಣ 8 (1) (ಸಿ) ಯಲ್ಲಿನ ವಿನಾಯಿತಿಯು ಸರ್ಕಾರವು ರಹಸ್ಯತ್ವವನ್ನು ಕೇಳಿದಾಗ ಅನ್ವಯಿಸುತ್ತದೆ. ಮತ್ತು ವರದಿ ಅಥವಾ ಅದರ ಭಾಗವನ್ನು ಲೋಕಸಭೆಗೆ ಒದಗಿಸದಿದ್ದಾಗ ಅಥವಾ ಯಾವುದೇ ಮಾಹಿತಿ ಅಥವಾ ಯವುದೇ ವರದಿ ಅಥವಾ ಅದರ ಭಾಗವನ್ನು ಲೋಕಸಭೆಯ ಸದಸ್ಯನೊಬ್ಬ ಕೇಳಿದಾಗ ಸಹಿತವು ಬಹಿರಂಗಪಡಿಸಲಾಗದಿದ್ದರೆ, ಇದು ಲೋಕಸಭೆ ಅಥವಾ ರಾಜ್ಯ

Scanned by CamScanner

ವಿಧಾನಮಂಡಲವು ಈ ವರದಿಯನ್ನು ಬಹಿರಂಗಪಡಿಸದಂತೆ ಸ್ಪಷ್ಟವಾಗಿ ನಿಷೇದಿಸಿದ ಸಂದರ್ಭದಲ್ಲಿಯು ಸಹಿತ ಅನ್ವಯವಾಗುತ್ತದೆ. CIC/MA/A/2009/000154 30th July 2009.

**ಮೂರನೇ ಪಕ್ಷಕಾರನ ಸ್ಪರ್ಧಾತ್ಮಕತೆಗೆ ತೊಂದರೆಯುಂಟಾಗುತ್ತೊ ಅಂಥ ವಾಣಿಜ್ಯ ರಹಸ್ಯ, ವ್ಯಾಪಾರ ಗೌಪ್ಯತೆ ಅಥವಾ ಬೌದ್ಧಿಕ ಆಸ್ತಿಯನ್ನೊಳಗೊಂಡ ಮಾಹಿತಿ. 8 (1) (ಡಿ). ಅಂಥ ಮಾಹಿತಿಯನ್ನು ಬಹುಸಂಖ್ಯೆಯ ಸಾರ್ವಜನಿಕರ ಹಿತದೃಷ್ಟಿಯಿಂದ ಬಹಿರಂಗಪಡಿಸುವುದು ಅಗತ್ಯವೆಂದು ಸಕ್ಷಮ ಪ್ರಾಧಿಕಾರಿಗೆ ಮನದಟ್ಟಾದ ಹೊರತು.**

1. ಸಾರ್ವಜನಿಕ ಪ್ರಾಧಿಕಾರ ಮತ್ತು 3ನೇ ಪಕ್ಷಗಾರನ ನಡುವೆ ಆದ ಯಾವುದೇ ವ್ಯಾಪಾರ ಒಪ್ಪಂದ ಸಾರ್ವಜನಿಕ ದಾಖಲೆಯು ವ್ಯಾಪಾರಿಕವಾಗಿ ಗೌಪ್ಯವಾಗಿದ್ದಲ್ಲಿ ಮಾತ್ರ ಬಹಿರಂಗ ಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. Appeal No.77/ICPB/2006 21st Aug 2006.

2. ಟೆಂಡರ್ ನೋಟೀಸಿನ ವಿವಿಧ ಬೇಡಿಕೆದಾರರಿಗೆ ಸಂಬಂಧಿಸಿದ ದಾಖಲೆಗಳನ್ನು, ವ್ಯಾಪಾರ ರಹಸ್ಯ ಅಥವ ವಾಣಿಜ್ಯ ಗೌಪ್ಯತೆಯೆಂದು ಪರಿಗಣಿಸತಕ್ಕದ್ದಲ್ಲ. ನಾಗರಿಕರು ಟೆಂಡರ್‌ದಾರನಿಗೆ ಟೆಂಡರ್ ಮಂಜೂರು ಮಾಡಲು ನೀಡಿದ ದಾಖಲೆಗಳ ಸತ್ಯಾಸತ್ಯತೆಯನ್ನು ತಿಳಿದುಕೊಳ್ಳುವ ಹಕ್ಕಿದೆ. ಒಮ್ಮೆ ಟೆಂಡರ್ ಪ್ರಕ್ರಿಯೆ ಅಂತಿಮಗೊಂಡು ಕಂಟ್ರಾಕ್ಟ ನೀಡಿದಲ್ಲಿ ಇದನ್ನು ರಹಸ್ಯವೆಂದು ಪರಿಗಣಿಸಲಗದು. ಆದ್ದರಿಂದ ಈ ಮಾಹಿತಿಯು ಪ್ರಕರಣ 8 (1) (ಡಿ) ಯಡಿ ವಿನಾಯ್ತಿ ಪಡೆದಿಲ್ಲ. L.P.A.No.205 of 2007 dt:08-08-2007, Jharkhand State V/s Naveenkumar Sinha and others. (Jharkhand HC)

3. ಕೇಂದ್ರ ಅಬಕಾರಿ ಇಲಾಖೆಗೆ 3ನೇ ಪಕ್ಷಗಾರ ತನ್ನ ಉದ್ಯಮಕ್ಕೆ ಸಂಬಂಧಿಸಿದಂತೆ ಸಲ್ಲಿಸಿದ ಎಲ್ಲ ಉತ್ಪಾದನಾ ಮತ್ತು ವಾಣಿಜ್ಯ ಚಟುವಟಿಕೆ ಮಾಹಿತಿ ಅಂದರೆ ಉತ್ಪಾದನಾ ಮಾಡುತ್ತಿರುವ ಚಟುವಟಿಕೆ, ಕಚ್ಚಾ ವಸ್ತು ಬಳಕೆ ಮತ್ತು ಅದರ ಗಾತ್ರ, ಸರಬರಾಜುದಾರರ ಹೆಸರು ಮತ್ತು ಅವರಿಂದ ಪಡೆದ ಸರಬರಾಜಿನ ಗಾತ್ರ, ಖರೀದಿದಾರ ಮತ್ತು ರಫ್ತುದಾರ ವಿವರ, ಪಡೆದುಕೊಂಡ ಲಾಭ ಇತ್ಯಾದಿ ಮಾಹಿತಿಯು ಬಹಿರಂಗ ಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. CIC/AT/A/2009/000231 12th June 2009.

4. ನ್ಯಾಷನಲ್ ಇನಫಾರಮೆಟಿಕ ಸೆಂಟರ (NIC) ಕರ್ನಾಟಕ ಸರ್ಕಾರದ ವಿವಿಧ ಇಲಾಖೆಗಳಿಗಾಗಿ ಸಿದ್ಧಪಡಿಸಿದ ಸಾಪ್ಟವೇರ ಕುರಿತಾದ ಕಡತ, ದಾಖಲೆಗಳನ್ನು ಪೂರೈಸಿದುವುದನ್ನು ತಿರಸ್ಕರಿಸಿದ್ದಕ್ಕೆ ಅರ್ಜಿದಾರನು ಮೇಲ್ಮನವಿ ಸಲ್ಲಿಸಿದಾಗ, NICಯು ತನ್ನ ಹೇಳಿಕೆಯಲ್ಲಿ, ಅರ್ಜಿದಾರ ಸ್ವತಃ ಒಬ್ಬ ಮಾರಾಟಗಾರನಾಗಿದ್ದು ಮತ್ತು NIC ಎಲ್ಲ ಸಾಪ್ಟವೇರ ಅಭಿವೃದ್ಧಿಪಡಿಸಿದ್ದು ಮತ್ತು ಸಂಬಂಧಿತ ಮಾಹಿತಿಯು ಬೌದ್ಧಿಕ ಆಸ್ತಿಯಾಗಿದ್ದು ತನ್ನ ಪ್ರತಿ ಸ್ಪರ್ಧಿಯಾದ ಅರ್ಜಿದಾರರಿಗೆ ಈ ಮಾಹಿತಿ ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. 24/ICPB/2006 dt:5th Jun 2006.NIC

5. ವಾಣಿಜ್ಯ ಮಾಹಿತಿ ಅಲ್ಲದೆ ಸಂಶೋಧನಾ ಮತ್ತು ಅಭಿವೃದ್ಧಿ ಪ್ರಯತ್ನ ಮತ್ತು ವ್ಯವಸ್ಥಾಪನಾ ರೀತಿಗಳು ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. CIC/AT/A/2006/00443 dt:13th Dec 2006.

Scanned by CamScanner

## ತನ್ನ ನಂಬಿಕೆಯ ವಿಶ್ವಾಸದ ಸಂಬಂಧದಲ್ಲಿ ಒಬ್ಬ ವ್ಯಕ್ತಿಯಿಂದ ದೊರಕುವ ಮಾಹಿತಿ. 8 (1) (ಇ).

ಅಂಥ ಮಾಹಿತಿಯನ್ನು ಬಹುಸಂಖ್ಯೆಯ ಸಾರ್ವಜನಿಕ ಹಿತ ದೃಷ್ಟಿಯಿಂದ ಬಹಿರಂಗಪಡಿಸುವುದು ಅಗತ್ಯವೆಂದು ಸಕ್ಷಮ ಪ್ರಾಧಿಕಾರಿಗೆ ಮನದಟ್ಟಾದ ಹೊರತು.

1. ಬಹಿರಂಗ ಪಡಿಸುವಿಕೆಯಿಂದ ವಿನಾಯ್ತಿ ರಾಷ್ಟ್ರೀಕೃತ ಬ್ಯಾಂಕಿನ ಕಾರಕೂನಸಿಬ್ಬಂದಿಯ ನೇಮಕಾತಿ, ವರ್ಗಾವಣೆ ಮತ್ತು ಮೇಲ್ಬಡ್ತಿ ಕುರಿತಾದ ಮಾಹಿತಿಯನ್ನು ಬ್ಯಾಂಕಿನ ನೌಕರನಿಗೆ ಪೂರೈಸಬಹುದಾಗಿದ್ದು ಈ ಮಾಹಿತಿಯನ್ನು ಬ್ಯಾಂಕು ತನ್ನ ನೌಕರರ ನಂಬಿಕೆ ಅಧಾರದ ಮೇಲೆ ಹೊಂದಿದೆಯೆಂದು ಹೇಳತಕ್ಕುದ್ದಲ್ಲ. WP (C) No.9988 of 2007 (L), Dt:11-07-2007 Canara Bank V/s. Central Information Commission & others. (Kerala HC)

2. ನೇಮಕಾತಿ ಸಮಿತಿ ಸದಸ್ಯರುಗಳ ಹೆಸರು ಬಹಿರಂಗಪಡಿಸುವುದರಿಂದ ವಿನಾಯಿತಿ ಪಡೆದಿದೆ. CIC/OK/A/206/00413-416 16-11-2006.

3. ವಕೀಲರಿಂದ ಪಡೆದ ಕಾನೂನು ಸಲಹೆ ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. 463/IC (A) /2006 20-12-2006.

4. ಸಾರ್ವಜನಿಕ ಪ್ರಾಧಿಕಾರದ ಸಿಬ್ಬಂದಿಯೋರ್ವನ ನಡತೆಯ ಬಗ್ಗೆ ಸಾರ್ವಜನಿಕ ಪ್ರಾಧಿಕಾರದ ಅದಿಕಾರಿಗಳಿಬ್ಬರ ನಡುವಿನ ರಹಸ್ಯವಾದ ಮತ್ತು ನಂಬಿಕೆಯುಳ್ಳ ಮುದ್ರಿತಗೊಂಡ ಸಂಭಾಷಣೆಯು ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. CIC/AT/A/2008/0125.

5. ಭಾರತದ ಮುಖ್ಯ ನ್ಯಾಯಾದೀಶರು ಮತ್ತು ಭಾರತದ ರಾಷ್ಟ್ರಪತಿಗಳ ನಡುವೆ ಸರ್ವೋಚ್ಚ ನ್ಯಾಯಾಲಯದ ಮತ್ತು ಉಚ್ಚ ನ್ಯಾಯಾಲಯಗಳ ನ್ಯಾಯಾಧೀಶರುಗಳ ನೇಮಕಾತಿ ಕುರಿತಾಗಿ ನಡೆದ ಸಂವಾದವು ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. CIC/AT/A/2006/00113 dt:10th July 2006

6. ನಂಬಿಕೆ ಮತ್ತು ವಿಶ್ವಾಸರ್ಹದಿಂದ ನೀಡಿದ ಮಾಹಿತಿಯನ್ನು ರಕ್ಷಿಸುವುದೇ 8 (1) (ಇ) ಉದ್ದೇಶವಾಗಿದೆ. ಕೋರಿದ ಮಾಹಿತಿಯು ನಂಬಿಕೆ ಮತ್ತು ವಿಶ್ವಾಸಾರ್ಹ ನೀಡಿದ ಮಾಹಿತಿಗೆ ಚ್ಯುತಿಯಾಗದಿದ್ದರೆ ಅಂಥ ಮಾಹಿತಿಯನ್ನು ಬಹಿರಂಗಪಡಿಸಬಹುದಾಗಿದೆ. ನಂಬಿಕೆಯ ಸಂಬಂಧವು ಸಾಮಾನ್ಯವಾಗಿ ರಹಸ್ಯವಾದ ಸಂಬಂಧವಾಗಿದ್ದು, ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಯ ಮೇಲೆ ನಂಬಿಕೆ ಮತ್ತು ವಿಶ್ವಾಸವನ್ನಿಟ್ಟು ಆ ವ್ಯಕ್ತಿಗೆ ನೀಡುವ ಮಾಹಿತಿಯಾಗಿದೆ. ಇದು ಲಾಭ ಮತ್ತು ಪ್ರಯೋಜನದ ವಿಚಾರವನ್ನು ಹೊರತುಪಡಿಸಿದೆ. WP(C)No.8396/2009, 16907/2006, 4788/2008, 9914/2009, 6085/2008, 7304/2007, 7930/2009, 3607/2007 dt:30th Nov 2009 UOI v/s CIC &anr, UOI v/s Sweety Kotari, UOI v/s CIC and anr, UOI v/s CIC &anr, UOI v/s CIC &anr, UOI v/s Babaranjan Ray & anr, ACP(Cr) v/s CIC & anr, ICAI v/s CIC and WP No.288/20099, 2nd Sept 2009-CPIO SCI New Delhi v/s Subhash Chandra Agarwal and anr.

Scanned by CamScanner

ವಿದೇಶಿ ಸರಕಾರದಿಂದ ರಹಸ್ಯವಾಗಿ ಪಡೆದ ಮಾಹಿತಿ. 8 (1) (ಎಫ್)

ಯಾರೇ ವ್ಯಕ್ತಿಯ ಜೀವ ಅಥವಾ ದೈಹಿಕ ಸುರಕ್ಷತೆಗೆ ಅಪಾಯ ಉಂಟಾಗುತ್ತದೆಯೋ ಅಥವಾ ಕಾನೂನು ಜಾರಿಯ ಅಥವಾ ಭದ್ರತೆ ಉದ್ದೇಶಗಳಿಗಾಗಿ ರಹಸ್ಯವಾಗಿ ನೀಡಿದ ಮಾಹಿತಿಯ ಅಥವಾ ಸಹಾಯದ ಮೂಲವನ್ನು ಗುರುತಿಸಬಹುದಾದಂಥಹ ಮಾಹಿತಿ. 8 (1) (ಜಿ)

1. ಪೋಲಿಸ ಠಾಣೆಗೆ ಫಿರ್ಯಾದುದಾರರು ಫಿರ್ಯಾದನ್ನು ನೀಡಿ, ತಾನು ನೀಡಿರುವ ಫಿರ್ಯಾದಿನ ಅಂಶಗಳನ್ನು ಹೊರಗೆಡುವುದರಿಂದ ತನ್ನ ಜೀವ ಅಥವಾ ದೈಹಿಕ ಸುರಕ್ಷತೆಗೆ ಅಪಾಯ ಉಂಟಾಗುತ್ತದೆ ಎಂದು ವಿವರಿಸಿದಾಗ ಮಾತ್ರ ಆ ಫಿರ್ಯಾದು ಬಹಿರಂಗಪಡಿಸುವುದರಿಂದ ವಿನಾಯಿತಿ ಪಡೆದಿದೆ. KIC254 APL 2006 17th Oct 2006 R Ramanand Shetty V/s Supdt of Police Mangalore.

2. ಪೋಲಿಸ ಅಧಿಕಾರಿಗಳ ಸಂದರ್ಶಕರ ವಹಿ (Visitor's Register of Police Officers)ಬಹಿರಂಗ ಪಡಿಸುವುದರಿಂದ ವಿನಾಯತಿ ಪಡೆದಿದೆ. CIC/AT/A/2005/0003 12th July 2006.

3. ಪೋಲಿಸ ಠಾಣೆಗಳಲ್ಲಿನ ಕ್ಯಾಮೆರಾ ರೆಕಾರ್ಡಿಂಗ ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. CIC/AT/A/2006/00330 12th Dec 2006

4. ಕಳ್ಳ ಸಾಗಣೆ ಮಾಡಿದ ವಸುಗಳನ್ನು ವಶಪಡಿಸುಕೊಳ್ಳುವಲ್ಲಿ ಪಾಲ್ಗೊಡ ಅಧಿಕಾರಿಗಳ ಹೆಸರು, ಮಾಹಿತಿ ನೀಡಿದವರ ಹೆಸರು, ವಿಳಾಸ ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. 298/IC(A)/2006 21st Sep 2006.

5. ಶಿಸ್ತು ಕ್ರಮ ಪ್ರಕ್ರಿಯೆಯಲ್ಲಿ ಪಾಲ್ಗೊಂಡ ಅಧಿಕಾರಿಗಳ ಹೆಸರು ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. CIC/AD/A/2010/000018 dt: 14th Jan 2010.

6. ತನಿಖಾಧಿಕಾರಿಗಳ ಪ್ರಯಾಣದ ವಿವರ, ವಾಹನದ ಹಾಜರಾತಿ ಪುಸ್ತಕ, ಸಂದರ್ಶನದ ಉದ್ದೇಶ, ಹೆಚ್ಚುವರಿ ಸಮಯದ ಶುಲ್ಕ ಸಂದಾಯ ಇತ್ಯಾದಿ ಬಹಿರಂಗಪಡಿಸುವಲ್ಲಿ ಯಾವುದೇ ಸಾರ್ವಜನಿಕ ಹಿತಾಸಕ್ತಿ ಇಲ್ಲದ್ದರಿಂದ ಮತ್ತು ಈ ಮಾಹಿತಿಯು ಬಹಿರಂಗಪಡಿಸುವಿಕೆಯಿಂದ ತನಿಖಾಧಿಕಾರಿಯ ದೈಹಿಕ ಸುರಕ್ಷತೆಗೆ ಧಕ್ಕೆಯಾಗುವ ಸಂಭವವಿದ್ದು ಸೂಕ್ಷ್ಮವಾದ ಕಾರ್ಯಗಳನ್ನು ನಿರ್ವಹಿಸುವ ಸಾಮರ್ಥ್ಯಕ್ಕೂ ಸಹಿತ ಧಕ್ಕೆಯುಂಟಾಗುವ ಸಂಭವವಿರುವದರಿಂದ ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. CIC/AT/A/2009/000100 dt: 16th Sep 2009.

7. ಒಂದು ಸಾರ್ವಜನಿಕ ಪ್ರಾಧಿಕಾರದ ಸಿಬ್ಬಂದಿಯ ವಿರುದ್ಧ ದೂರನ್ನು ದಾಖಲಿಸಿ ಫಿರ್ಯಾದುದಾರರ ಗುರುತನ್ನು ಬಹಿರಂಗಪಡಿಸುವುದರಿಂದ ಆ ಫಿರ್ಯಾದುದಾರನ ಜೀವಕ್ಕೆ ಅಥವಾ ದೈಹಿಕ ಸುರಕ್ಷತೆಗೆ ಅಪಾಯ ಉಂಟಾಗುವುದಲ್ಲದೆ ಸಾರ್ವಜನಿಕ ಪ್ರಾಧಿಕಾರದ ಮಾಹಿತಿಯ ಮೂಲವನ್ನು ಗುರುತಿಸಬಲ್ಲದ್ದರಾಗಿದ್ದರಿಂದ ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. F.No.CIC/AT/A/2008/01500 dt: 23rd March 2009.

Scanned by CamScanner

**ತನಿಖಾ ಪ್ರಕ್ರಿಯೆಗೆ ಅಥವಾ ಅಪರಾಧಿಗಳ ದಸ್ತಗಿರಿಗೆ ಅಥವಾ ಪ್ರಾಸಿಕ್ಯೂಶನ ಕಾರ್ಯಕ್ಕೆ ಅಡಚಣೆ ಮಾಡುವಂಥ ಮಾಹಿತಿ. 8 (1) (ಎಚ್)**

1. ಅರ್ಜಿದಾರ ಕ್ರಿಮಿನಲ್ ಮೊಕದ್ದಮೆ ಎದುರಿಸುತ್ತಿದ್ದು ತನ್ನ ಬಂಧನಕ್ಕೆ ಕುರಿತಾದ ಮಾಹಿತಿಯನ್ನು ಕೋರಿದಲ್ಲಿ ಆ ಮಾಹಿತಿಯು ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. C.M.W.P No.49871 of 2008 Dt: 23-09-2008 Vikram Seimon V/s State Information Commission and others (All HC).

2. ಆರೋಪಿಯ ಬ್ಯಾಂಕ ಖಾತೆಯನ್ನು ಮುಟ್ಟುಗೋಲು ಮತ್ತು ಮುಕ್ತಗೊಳಿಸಿದ್ದರ ಕುರಿತಾದ ಎಲ್ಲ ದಾಖಲೆಗಳು ಕಡತಗಳು, ತನಿಖೆ ಪ್ರಗತಿಯಲ್ಲಿರುವುದರಿಂದ, ಇವುಗಳನ್ನು ಬಹಿರಂಗಪಡಿಸುವುದರಿಂದ ತನಿಖಾ ಪ್ರಕ್ರಿಯೆಗೆ ಅಡಚಣೆ ಉಂಟಾಗುವುದರಿಂದ ಈ ಮಾಹಿತಿಯನ್ನು ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. 157/IC (A) /2006 1st Aug 2006 – Ottavio Quattrochi Case.

3. ದೋಷಾರೋಪಣಾ ಪಟ್ಟಿ (Charge Sheet)ನ್ನು ಅಜಿದಾರನಿಗೆ ನೀಡಿದ ನಂತರ ತನಿಖೆ ಮುಂದುವರಿದಿದೆ ಎನ್ನುವ ಹೇಳಿಕೆ ಸಮಂಜಸವಲ್ಲ. CIC/MA/C/2005 -2006 4th July 2006.

4. ಒಂದು ಅಪರಾಧಕ್ಕೆ ಕುರಿತಾದ ತನಿಖಾ ಪ್ರಕ್ರಿಯೆಗೆ ಸಂಬಂಧಿಸಿದ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ಕಾನೂನು ಜಾರಿಗೆ ಗಂಭೀರ ಅಡ್ಡಿಯಾಗುವುದಲ್ಲದೆ ಅಪರಾಧಿಕ ಅಂಶಗಳು ಇದನ್ನು ದುರುಪಯೋಗ ಮಾಡಿಕೊಳ್ಳಬಹುದಾಗಿದ್ದರಿಂದ ಈ ಮಾಹಿತಿಯು ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. CIC/AT/A/2006/00071/ 11th May 2006, CIC/AT/A/2006/00355 26th Dec 2006.

5. ಒಂದು ಪಿರ್ಯಾದು ವಿಚಾರಣೆಯಲ್ಲಿದ್ದಾಗ ಅದಕ್ಕೆ ಸಂಬಂಧಿಸಿದ ಮಾಹಿತಿ / ದಾಖಲೆಗಳನ್ನು ವಿಚಾರಣೆ ಪೂರ್ಣಗೊಳ್ಳುವ ತನಕ ತಡೆಹಿಡಿಯತಕ್ಕದ್ದು. 127/ICPB/2006 17th Oct 2006.

6. CBI ಪ್ರಕರಣಗಳು ತನಿಖೆಗೆ ಅಥವಾ ವಿಚರಣೆಗೆ ಯಾವ ಸಿಬ್ಬಂದಿ ವಿರುದ್ಧ ಬಾಕಿ ಇದೆಯೋ ಅದರ ಪಟ್ಟಿ ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. 252/IC(A)/2006 7th Sep 2006.

7. ತನಿಖಾಧಿಕಾರಿಯು ಬೇರೆ ಬೇರೆ ವ್ಯಕ್ತಿಗಳಿಂದ ಪಡೆದುಕೊಂಡ ಹೇಳಿಕೆ (e Sheet) ಪ್ರತಿಗಳನ್ನು, ಆ ವ್ಯಕ್ತಿಗಳ ಪೂರ್ವಾನುಮತಿ ಪಡೆದು ನೀಡಬಹುದಾಗಿದೆ. 250/IC(A)/2006 7th Sep 2006.

8. ಪ್ರಾಸಿಕ್ಯೂಷನ ಪ್ರಕ್ರಿಯೆ ಜಾರಿಯಲ್ಲಿರುವಾಗ ಅಪರಾಧಿಯು ತನಗೆ ಅವಶ್ಯಕವಾದ ಮಾಹಿತಿಯನ್ನು ಸಾರ್ವಜನಿಕ ಪ್ರಾಧಿಕಾರದಿಂದ ಕೋರಿದಲ್ಲಿ ಅದು ಪ್ರಾಸಿಕ್ಯೂಷನ್ ಕಾರ್ಯಕ್ಕೆ ಅಡಚಣೆ ಉಂಟುಮಾಡುವುದರಿಂದ ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. ಅಪರಾಧಿಯು ಪ್ರಕರಣ ನಡೆಯುತ್ತಿರುವ ನ್ಯಾಯಾಲಯದಿಂದ ಸೂಕ್ತ ಅರ್ಜಿ ಸಲ್ಲಿಸಿ ಈ ಮಾಹಿತಿಯನ್ನೂಉ ಪಡೆಯಬಹುದಾಗಿದೆ. 5561/IC(A) 2010 24th June 2010.

Scanned by CamScanner

9. ಪ್ರಾಸಿಕ್ಯೂಷನ ಪ್ರಕ್ರಿಯೆ ಜಾರಿಯಲ್ಲಿದ್ದಾಗ ತನಿಖಾ ವರದಿ ಪೂರೈಸಲಾಗುವುದಿಲ್ಲ. ತನಿಖೆ ಪೂರ್ಣಗೊಂಡ ನಂತರ ಪ್ರಕರಣ 10(I) ರಡಿ ವಿನಾಯಿತಿ ಪಡೆದ ಮಾಹಿತಿಯನ್ನು ಪ್ರತ್ಯೇಕಿಸಿ ಪೂರೈಸಲು ಅವಕಾಶವಿದೆ. CIC/OK/A/2009/000132/ 12th June 2009, CIC/AD/C/2009/001145 19th March 2010.

10. ಸೇವೆ ಖಾಯಂಗೊಂಡ ಅಭ್ಯರ್ಥಿಗಳ ವಿರುದ್ಧ ವಿಚಕ್ಷನಾ ಇಲಾಖೆಯಿಂದ ತನಿಖೆ ಜಾರಿಯಲ್ಲಿದ್ದಾಗ ಈ ಅಭ್ಯರ್ಥಿಗಳ ಸಂಪರ್ಕ ವಿಳಾಸವನ್ನು ನೀಡುವುದರಿಂದ ತನಿಖೆಗೆ ಆದೇಶಿಸಿದ ಅಧಿಕಾರಿಯ ದೈಹಿಕ ಸುರಕ್ಷತೆಗೆ ಅಪಾಯ ಉಂಟಾಗುವುದರಿಂದ ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. CIC/AD/C/2009/001145 19th March 2009.

11. ತನಿಖೆ ಪೂರ್ಣಗೊಂಡ ನಂತರವೇ ಪ್ರಾಸಿಕ್ಯೂಷನ್ ಪ್ರಾರಂಭಗೊಳ್ಳುವುದರಿಂದ, ತನಿಖೆಯಲ್ಲಿ ಸಾಕ್ಷಿಯೆಂದು ಬಳಸಿಕೊಂಡ ಮಾಹಿತಿಯು, ತನಿಖೆ ಪೂರ್ಣಗೊಂಡಿದ್ದರೂ ಸಹಿತ ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. CIC/AT/C/2007/01508 17th June 2008.

12. ವಿಚಕ್ಷಣಾ ವರದಿಯ ಅಂತಿಮ ಭಾಗವನ್ನು ಮಾತ್ರ ಬಹಿರಂಗಪಡಿಸಬಹುದಾಗಿದೆ. CIC/AT/A/2006/000322 11th December 2006.

13. ತನ್ನ ವಿರುದ್ಧದ ಭ್ರಷ್ಟಾಚಾರದ ಪ್ರಕರಣದಲ್ಲಿನ ಇಲಾಖಾ ವಿಚಾರಣೆಗೆ ಸಂಭಂದಪಟ್ಟ ದಾಖಲೆಗಳು ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. 243/ICPB/2006 & 244/ICPB/2006 27th December 2006.

14. ಪ್ರಕರಣ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವಾಗ ಆ ನ್ಯಾಯಾಲಯ ಪ್ರತಿಬಂಧಿಸದಿದ್ದಲ್ಲಿ, ಇಲಾಖಾ ವಿಚಾರಣೆಗೆ ಕುರಿತಾದ ಮಾಹಿತಿಯನ್ನು ಬಹಿರಂಗಪಡಿಸಬಹುದಾಗಿದೆ. 267/ICPB/2006 10th Jan 2007.

15. ಒಂದು ಪ್ರಕರಣವು ಅರೇನ್ಯಾಯಿಕ ವಿಚಾರಣೆಯಲ್ಲಿದ್ದಾಗ ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ಬಹಿರಂಗಪಡಿಸುವುದು ಪ್ರಾಸಿಕ್ಯೂಷನ ಕಾರ್ಯಕ್ಕೆ ತಡೆ ಒಡ್ಡುವುದರಿಂದ ಬಹಿರಂಗ ಪಡಿಸುವುದರಿಂದ ವಿನಾಯಿತಿ ಪಡೆದಿದೆ. CIC/AT/A/2006/00586 18th Sep 2007, CIC/AT/A/2008/01466 23rd March 2009.

16. ಸಾರ್ವಜನಿಕ ಪ್ರಾಧಿಕಾರದ ಸಿಬ್ಬಂದಿ ವಿರುದ್ಧ ವಿಚಕ್ಷಣಾ ತನಿಖೆ ಚಾಲ್ತಿಯಲ್ಲಿದ್ದಾಗ ಅದಕ್ಕೆ ಕುರಿತಾದ ಮಾಹಿತಿಯನ್ನು ಬಹಿರಂಗಪಡಿಸುವ್ದರಿಂದ ಅದು ತನಿಖಾ ಮಾಹಿತಿಯ ಮೂಲವನ್ನು ಗುರುತಿಸಬಹುದಾಗಿದ್ದು ತನಿಖಾ ಪ್ರಕ್ರಿಯೆಗೆ ಅಡ್ಡಿಪಡಿಸಬಹುದಾಗಿದ್ದರಿಂದ ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. CIC/AT/A/2010/000047 dt: 23rd March 2010.

17. ಪ್ರಾಸಿಕ್ಯೂಷನಗೆ ಅನ್ವಯಿಸುವ ನಿಯಮವೇ ತನಿಖೆಗೂ ಅನ್ವಯಿಸುತ್ತದೆ. WP(C) No.16712/2006 dt: 10th Nov 2006 S.P.Singh V/s Union of India and ors (Delhi H.C.)

18. ಸಿಬಿಐಯ್ ನ್ಯಾಯಾಲಯದಲ್ಲಿ ಚಾಲ್ತಿಯಲ್ಲಿರುವ ಪ್ರಕರಣ ಇನ್ನೂ ಅಂತಿಮ ಹಂತಕ್ಕೆ ತಲುಪದ್ದರಿಂದ, ದೋಷಾರೊಪಣೆ ಮತ್ತು ದೋಷಾರೋಪಣೆ ಸಿದ್ಧಪಡಿಸಲು ಕಾರಣವಾದ ಆಧಾರಗಳ ಕುರಿತಾದ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ, ಆರೋಪಿತನು ತನಿಖೆಯನ್ನು ತಿರುಚಲು ಅಥವಾ ಅದರ ಮೇಲೆ ಪ್ರಭಾವ ಬೀರಲು ಮತ್ತು ತನ್ನ ವಿರುದ್ಧದ ಸಾಕ್ಷಿಗಳನ್ನು ತಿರುಚಲು ಮತ್ತು ದಸ್ತಗೀರವನ್ನು ತಪ್ಪಿಸಲು ಈ ಮಾಹಿತಿಯನ್ನು ಬಳಸಬಹುದಾಗಿದ್ದರಿಂದ ಈ ಹಂತದಲ್ಲಿ ಚಾಲ್ತಿ ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯು ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. CIC/AD/A/2009/000778 dt: 15th June 2010.

Scanned by CamScanner

19. ಬಲಿಪಶುವಾದವರ ಕುಟುಂಬದವರಿಗೆ ವಿಶೇಷ ಸಂದರ್ಭದಲ್ಲಿ ಮಾತ್ರ ತನ್ನ ಸಂಬಂಧಿ ಸಂಶಯಾಸ್ಪದ ಸಂದರ್ಭದಲ್ಲಿ ಮರಣ ಹೊಂದಿದ್ದರ ಬಗ್ಗೆ ಚಾಲ್ತಿಯಲ್ಲಿರುವ ತನಿಖೆಗೆ ಕುರಿತಾದ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ತನಿಖಾ ಪ್ರಕ್ರಿಯೆಗೆ ಅಡ್ಡಿ ಅಥವಾ ತಡೆ ಉಂಟಾಗಲಾರದು, ಹೊರತಾಗಿ ತನಿಖೆಯು ಸೂಕ್ತ ಮಾರ್ಗದಲ್ಲಿ ಮುಂದುವರೆದು ತನಿಖಾಧಿಕಾರಿಗಳು ಸತ್ಯದತ್ತ ಬೇಗನೆ ತಲುಪಲು ಅನುಕೂಲವಾಗುವುದು. CIC/AT/A/2006/00355 dt: 26th Dec 2006.

20. ಪೋಲಿಸ್ ತನಿಖೆಯ ಪ್ರಗತಿ ವರದಿ ಬಹಿರಂಗಪಡಿಸುವಿಕೆಯಿಂದ ವಿನಾಯಿತಿ ಪಡೆದಿದೆ. F No.CIC/AT/A/2006/00004 dt: 30th June 2006.

**ಮಂತ್ರಿ ಪರಿಷತ್ತಿನ, ಕಾರ್ಯದರ್ಶಿಗಳ ಮತ್ತು ಇತರ ಅಧಿಕಾರಿಗಳ ಚರ್ಚೆಗಳ ದಾಖಲೆಗಳು ಸೇರಿದಂತೆ ಸಚಿವ ಸಂಪುಟದ ಕಾಗದ ಪತ್ರಗಳು 8 (1) (ಆಯ್)**

1. ಆದರೆ ಮಂತ್ರಿ ಪರಿಷತ್ತಿನ ನಿರ್ಣಯಗಳು, ಆ ನಿರ್ಣಯಗಳಿಗೆ ಕಾರಣಗಳು ಮತ್ತು ತೆಗೆದುಕೊಂಡ ನಿರ್ಣಯಗಳಿಗೆ ಆಧರಿಸಿದ ವಿಷಯ ಸಾಮಗ್ರಿ ಇವುಗಳನ್ನು ನಿರ್ಣಯವನ್ನು ತೆಗೆದುಕೊಂಡ ಮತ್ತು ಆ ವಿಷಯ ಪೂರ್ಣಗೊಂಡ ಅಥವಾ ಮುಕ್ತಾಯಗೊಂಡ ನಂತರ ನೀಡಬಹುದು. 132/ICPB/2006 19th Oct 2006, CIC/AT/A/2006/00145 13th Jul 2006.
2. ಪ್ರಕರಣ 8 (1) (ಆಯ್) ರಡಿ ಮಂತ್ರಿ ಪರಿಷತ್ತಿನ, ಕಾರ್ಯದರ್ಶಿಗಳ ಮತ್ತು ಇತರ ಅಧಿಕಾರಿಗಳ ಚರ್ಚೆಗಳ ದಾಖಲೆಗಳು ಸೇರಿದಂತೆ ಸಚಿವ ಸಂಪುಟದ ಕಾಗದ ಪತ್ರಗಳನ್ನು ಬಹಿರಂಗಪಡಿಸುವಿಕೆಯಿಂದ ವಿನಾಯಿತಿಗೊಳಿಸಲಾಗಿದೆ. ಪರಂತು ಮಂತ್ರಿ ಪರಿಷತ್ತಿನ ನಿರ್ಣಯಗಳು, ಆ ನಿರ್ಣಯಗಳಿಗೆ ಕಾರಣಗಳು ಮತ್ತು ತೆಗೆದುಕೊಂಡ ನಿರ್ಣಯಗಳಿಗೆ ಆಧರಿಸಿದ ವಿಷಯ ಸಾಮಗ್ರಿ ಇವುಗಳನ್ನು, ನಿರ್ಣಯವನ್ನು ತೆಗೆದುಕೊಂಡ ಮತ್ತು ಆ ವಿಷಯ ಪೂರ್ಣಗೊಂಡ ಅಥವಾ ಮುಕ್ತಾಯಗೊಂಡ ತರುವಾಯ ಸಾರ್ವಜನಿಕರಿಗೆ ತಿಳಿಯುವಂತೆ ಮಾಡತಕ್ಕದ್ದು. ಅಂದರೆ ನಿರ್ಧಿಷ್ಟ ಸಮಯದವರೆಗೆ ಮಾತ್ರ ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ ಎಂದರ್ಥ. ಅನಿರ್ಧಿಷ್ಟ ಸಮಯದ ವರೆಗೆ ಅಥವಾ ಎಂದಿಗೂ ಕೊನೆಗೊಳ್ಳದ ಸಮಯದ ವರೆಗೆ ಎಂದರ್ಥವಲ್ಲ. ಆದರೆ ಇದು ಮಂತ್ರಿ ಪರಿಷತ್ತು ನಿರ್ಧಾರ ಕೈಗೊಳ್ಳುವವರೆಗೆ ಮತ್ತು ಆ ವಿಷಯ ಪೂರ್ಣಗೊಳ್ಳುವ ಅಥವಾ ಮುಕ್ತಾಯಗೊಳ್ಳುವ ತನಕ ಮಾತ್ರ. ಪ್ರಕರಣ 8 (1) (ಆಯ್) ನ 2ನೇ ಅಭಿಸಂದಿಯು 1ನೇ ಅಭಿಸಂದಿಯನ್ನು ಸ್ಪಷ್ಟಪಡಿಸಿದೆ. 1ನೇ ಅಭಿಸಂದಿಯು ಮಂತ್ರಿ ಪರಿಷತ್ತು ನಿರ್ಧಾರ ಕೈಗೊಂಡ ನಂತರ ಮತ್ತು ಆ ವಿಷಯ ಪೂರ್ಣಗೊಂಡ ಅಥವಾ ಮುಕ್ತಾಯಗೊಂಡ ನಂತರ ಮಾಹಿತಿಯನ್ನು ಬಹಿರಂಗಪಡಿಸಬಾರದೆಂಬ ಮೇಲಿನ ನಿರ್ಬಂಧವನ್ನು ತೆಗೆದುಹಾಕುತ್ತದೆ. ಅಂತೆಯೇ ಎರಡನೇ ಅಭಿಸಂದಿಯು 1ನೇ ಅಭಿಸಂದಿಯು ಅನ್ವಯವಾಗುತ್ತಿದ್ದಾಗ್ಯೂ ಸಹಿತ, 8 (1) ನೇ ಉಪಪ್ರಕರಣದ (ಎ) (ಸಿ) ಮತ್ತು (ಆಯ್) ಉಪಬಂಧಗಳಡಿ ನಿರ್ಧಿಷ್ಟ ಪಡಿಸಿದ ವಿನಾಯಿತಿಗಳ ಅಡಿಯಲ್ಲಿ ಬರುವಂತೆ ವಿಷಯಗಳನ್ನು ಬಹಿರಂಗಪಡಿಸುತಕ್ಕದ್ದಲ್ಲವೆಂದು ಸ್ಪಷ್ಟಿಕರಿಸಿದೆ. WP(C)No.8396/2009, 16907/2006, 4788/2008, 9914/2009, 6085/2008, 7304/2007, 7930/2009,3607/2007 dt: 30th Nov 2009 UOI v/s CIC & anr, UOI v/s Sweety Kotari, UOI v/s CIC and anr, UOI v/s CIC & anr, UOI v/s CIC & anr,UOI v/s Babaranjan Ray & anr, ACP (Cr) v/s CIC & anr, ICAI v/s CIC.

Scanned by CamScanner

ಯಾವ ಮಾಹಿತಿಯು ಯಾವುದೇ ಸಾರ್ವಜನಿಕ ಚಟುವಟಿಕೆ ಅಥವಾ ಹಿತಾಸಕ್ತಿಗೆ ಸಂಬಂಧಪಡುವುದಿಲ್ಲವೋ ಅಥವಾ ಯಾವ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ವ್ಯಕ್ತಿಗತ ಗೌಪ್ಯತೆಯನ್ನು ಅನಗತ್ಯವಾಗಿ ಆಕ್ರಮಿಸಿದಂತಾಗುತ್ತದೆಯೋ ಅಂಥ ವ್ಯಕ್ತಿಗತ ಮಾಹಿತಿಗೆ ಸಂಬಂಧಿಸಿದ ಮಾಹಿತಿ 8 (1) (ಜೆ)

ಬಹು ಸಂಖ್ಯೆಯ ಸಾರ್ವಜನಿಕರ ಹಿತದೃಷ್ಟಿಯಿಂದ ಬಹಿರಂಗಪಡಿಸುವುದು ಅಗತ್ಯವೆಂದು ಸಕ್ಷಮ ಪ್ರಾಧಿಕಾರಕ್ಕೆ ಮನದಟ್ಟಾದ ಹೊರತು.

ರಾಜ್ಯವನ್ನು ಹೊರತುಪಡಿಸಿ ಒಬ್ಬ ವ್ಯಕ್ತಿಯು ಹೊಂದಿರುವ ಕೃತಿ ಸ್ವಮ್ಯದ ಉಲ್ಲಂಘನೆಯಾಗಬಹುದಾದ ಮಾಹಿತಿಯನ್ನು ಪ್ರಕರಣ 9ರಡಿ ನಿರಾಕರಿಸಬಹುದು.

1) ಸರ್ಕಾರಿ ನೌಕರರ ಆಸ್ತಿ ಮತ್ತು ದಾಯಿತ್ವದ ವಿವರ ಬಹಿರಂಗಪಡಿಸುವಿಕೆ ಕುರಿತು ರಾಮಕೃಷ್ಣಗೌಡಾ ವಿರುದ್ಧ ಕರ್ನಾಟಕ ಮಾಹಿತಿ ಆಯೋಗ ರಿಟ್ ಪಿಟಿಶನ್ ನಂ.7953/2007 ದಿ:16-7-2009 ರನ್ನು ಪ್ರಶ್ನಿಸಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪಿಲ್ ನಂ.1634/2009 ರಡಿ ತಡೆಯಾಜ್ಞೆ ನೀಡಿರುವುದರಿಂದ, ಈ ಆದೇಶಗಳು ವಿಲೇವಾರಿ ಆಗುವತನಕ ಸರ್ಕಾರಿ ನೌಕರರ ಆಸ್ತಿ ಮತ್ತು ದಾಯಿತ್ವ ಬಹಿರಂಗ ಪಡಿಸುವಿಕೆ ಕುರಿತಾದ ಎಲ್ಲ ಪ್ರಕರಣಗಳನ್ನು ಬದಿಗಿಡಲಾಗಿದೆ. KIC 251 PTN/2010 dt:10-5-2010- Sri Arunkumar v/s i) AEE BBMP Chandra Layput SD Bangalore ii) AEE BBMP Shashkar Bhavan Vijay Nagar, Bangalore.
2) ನಾಗರಿಕ ಸೇವಕನ ಸೇವಾ ಪುಸ್ತಕವನ್ನು ವೈವಾಹಿಕ ಪ್ರಕರಣದಲ್ಲಿ ಅವನ ಹೆಂಡತಿ ತನ್ನ ಪ್ರಕರಣಕ್ಕೆ ಪೂರಕವಾಗಲೆಂದು ಮಾಹಿತಿ ಹಕ್ಕಿನಡಿ ಕೋರಲು ಅವಕಾಶವಿಲ್ಲ. ಒಬ್ಬ ಖಾಸಗಿ ವ್ಯಕ್ತಿಯ ಸ್ವಕೀಯತೆಯಷ್ಟೆ ಮಹತ್ವ ಒಬ್ಬ ನಾಗರಿಕ ಸೇವಕನಾಗಿದೆ, ಈ ಮಾಹಿತಿಯನ್ನು ಬಹಿರಂಗಪಡಿಸುವಿಕೆಯಿಂದ ವಿನಾಯ್ತಿ ಪಡೆದಿದೆ.W.P.(C) No.803 0f 2009 Dt:01-07-2009 Vijay Prakash V/s Union of India and others (Delhi HC) .
3) ಲೋಕ ಸೇವಾ ಆಯೋಗ ನಡೆಸಿದ ಪರೀಕ್ಷೆಯಲ್ಲಿನ ಅಂಕ ಮತ್ತು ಮೆರಿಟ್ ಪಟ್ಟಿಯನ್ನು ಪೂರೈಸಲಾಗಿದ್ದು, ಆದರೆ ಆಯ್ಕೆ ಪದ್ಧತಿಯ ನಿಷ್ಕಳಂಕತೆಯನ್ನು ಕಾಪಾಡುವ ದೃಷ್ಟಿಯಿಂದ ಸಿದ್ದಪಡಿಸಿದ ಸಂದರ್ಶನ ಪಟ್ಟಿಯನ್ನು ಬಹಿರಂಗಪಡಿಸದಿರುವುದು ತಪ್ಪಲ್ಲ.C.W.T.C. No. 14486 of 2009 Sayyad Hussain Abbas Rizvi V/s State Information Commissiona anad others (Patna HC).
4) ಅರ್ಜಿದಾರರ ಕುಟುಂಬದ ರೋಗಿಗೆ ಸಂಬಂಧಪಟ್ಟ ರೋಗ ಸ್ವರೂಪದ ಹಾಳೆಗಳನ್ನು ಅರ್ಜಿದಾರರಿಗೆ ಮಾತ್ರ ನೀಡಲು ಬರುತ್ತದೆ.KIC 538 COM 2006.
5) ರೋಗಿಗಳ ಪರಿಸ್ಥಿತಿ ಪುಟಗಳು (Case sheet of Patients) ಅವರ ವೈಯಕ್ತಿಕ ದಾಖಲೆಗಳಾಗಿರುವುದರಿಂದ ಯಾವ ಸಾರ್ವಜನಿಕ ಉದ್ದೇಶಕ್ಕಾಗಿ ಬೇಕಾಗಿರುತ್ತವೆಂದು ಮತ್ತು ಬಹು ಸಂಖ್ಯೆಯ ಸಾರ್ವಜನಿಕ ಹಿತದೃಷ್ಟಿಯಿಂದ ಬಹಿರಂಗ ಪಡಿಸುವ ಅಗತ್ಯತೆ ಇದ್ದಾಗ ಮಾತ್ರ ಅವುಗಳನ್ನು ಪೂರೈಸಬಹುದು. KIC 66 APL 2006 G Raju Intech V/s PIO D. Devaraj Urs Govt,Hospital 5th May 2006.
6) ಆದಾಯ ತೆರಿಗೆ ವಿವರವು () ರಹಸ್ಯವಾಗಿದ್ದು ವ್ಯಾಪಾರಿಕ ವ್ಯವಹಾರವನ್ನು ಒಳಗೊಂಡಿದ್ದು ಮತ್ತು ಮೂರನೇ ವ್ಯಕ್ತಿಗೆ ಸಂಬಂಧಿಸಿದ್ದರಿಂದ ಬಹಿರಂಗಪಡಿಸುವಿಕೆಯಿಂದ ವಿನಾಯ್ತಿ ಪಡೆದಿದೆ 22/IC(A)/2006 30th March 2006, 327/ IC (A)/2006 20th Oct 2006.
7) ಒಬ್ಬ ವ್ಯಕ್ತಿ ತನ್ನ ಸ್ವಂತ ಪ್ರಕರಣದ ಬಗ್ಗೆ ಮಾಹಿತಿ ಕೋರಿದಲ್ಲಿ ಅದು ಬಹಿರಂಗ ಪಡಿಸುವಿಕೆಯಿಂದ ವಿನಾಯ್ತಿ ಪಡೆಯದಿದ್ದ ಸಂದರ್ಭದಲ್ಲಿ ಅದನ್ನು ನೀಡಬಹುದಾಗಿದ್ದು ವ್ಯಕ್ತಿಗತ ಗೌಪ್ಯತೆಯನ್ನು ಅಕ್ರಮಿಸೆದಂತಾಹುವುದಿಲ್ಲ. 80/ICPB/2006 28/08/2006

Scanned by CamScanner

8) ಸಾರ್ವಜನಿಕ ಪ್ರಾಧಿಕಾರದ ಅಧಿಕಾರಿ / ಸಿಬ್ಬಂದಿಯ ಇರುವಿಕೆ ಬಗ್ಗೆ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ವಿನಾಯಿತಿ ಪಡೆದಿದೆ. 167/IC(A)2006 14/08/2006

9) ಪೋಸ್ಟಲ್ ಪಿಂಚಣಿಯದಾರರಿಗೆ ದೊರೆಯುತ್ತಿರುವ ಪಿಂಚಣಿ ಮೊತ್ತ ಮತ್ತು ಅವರ ವಿಳಾಸದ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ವಿನಾಯಿತಿ ಪಡೆದಿದೆ. ICPB/A-18/CIC/2006 10/05/2006

10) ನಿಯುಕ್ತಿ ಸಮಯದಲ್ಲಿ ಅಭ್ಯರ್ಥಿಗಳು ನೀಡಿದ ಬಾಯೋಡಾಟಾಗಳನ್ನು ಬಹಿರಂಗಪಡಿಸಬಹುದೆ ವಿನಹ: ಆ ಅಭ್ಯರ್ಥಿಗಳು ತಾವು/ಅನರ್ಹರೆಂಬುದರ ಕುರಿತಾದ ವೈದ್ಯಕೀಯ ವರದಿಗಳು ಬಹಿರಂಗಪಡಿಸುವುದರಿಂದ ವಿನಾಯಿತಿ ಪಡೆದಿದೆ. ICPB/A-9/CIC/2006 03/04/2006

11) ಸಿಬ್ಬಂದಿ ರಜೆ ದಾಖಲೆ ಬಹಿರಂಗಪಡಿಸುವುದರಿಂದ ವಿನಾಯಿತಿ ಪಡೆದಿದೆ. CIC/OK/A/2006/00189 03/11/2006, CIC/OK/A/2006/00187-190 & 329 3-11-2006

12) ಸಂಬಳ ಪಡೆದುಕೊಂಡ, ನಿಯುಕ್ತಿಗೊಂಡ ದಿನಾಂಕ, ತರಬೇತಿ ಸಮಯದಲ್ಲೇನಾದರೂ ಸಂಬಳ ನಷ್ಟವಾಗಿದೆಯೋ ಹೇಗೆ, ಕುರಿತಾದ ಮಾಹಿತಿಯನ್ನು ಬಹಿರಂಗಪಡಿಸಬಹುದಾಗಿದ್ದು ಫಾರ್ಮ ನಂ. 16 ರಡಿ ಸಲ್ಲಿಸಿದ ಆದಾಯ ತೆರಿಗೆ ವಿನಾಯತಿ ಪಡೆದಿದೆ. CIC/OK/C/2008/00612/AD dt: 10/12/2008

13) Agreed List & Secret List ಬಹಿರಂಗಪಡಿಸುವುದರಿಂದ ವಿನಾಯತಿ ಪಡೆದಿದೆ. CIC/OK/A/2009/000131/AD dt: 12th June 2009

14) ಮೂರನೇ ವ್ಯಕ್ತಿಯ ರಜಾ ಮಾಹಿತಿ, ಸೇವಾ ಪುಸ್ತಕದಲ್ಲಿದ್ದಂತೆ ಅವನ ಕುಟುಂಬ ಸದಸ್ಯರ ಹೆಸರು ಮತ್ತು ವಿಳಾಸ, ಅವರ ಮದುವೆ, GPF ಅಕೌಂಟನಿಂದ ಪಡೆದುಕೊಂಡ ಹಣ ಇವೆಲ್ಲವು ವೈಯಕ್ತಿಕ ಮಾಹಿತಿಯಾಗಿದ್ದು ಸಾರ್ವಜನಿಕ ಚಟುವಟಿಕೆಗೆ ಯಾವುದೇ ರೀತಿ ಸಂಬಂಧಪಡದ್ದರಿಂದ ಬಹಿರಂಗಪಡಿಸುವುದರಿಂದ ವಿನಾಯತಿ ಪಡೆದಿದೆ. CIC/AT/A/2008/00761 18th Dec 2008

15) ಸಿಬ್ಬಂದಿಗಳ ACR ಬರೆಯಲು ಸರ್ಕಾರ ನೀಡಿದ ನಿರ್ದೇಶನಗಳು ಬಹಿರಂಗಪಡಿಸುವುದರಿಂದ ವಿನಾಯತಿ ಪಡೆದಿಲ್ಲ. CIC/AT/A/2007/01296 20th Jun 2008

16) ಜೀವವಿಮೆ ಪಾಲಿಸಿಗೆ ಸಂಬಂಧಿಸಿದ ಮಾಹಿತಿಯು ಬಹಿರಂಗಪಡಿಸುವುದರಿಂದ ವಿನಾಯತಿ ಪಡೆದಿದೆ. CIC/AT/A/2007/00707, 00708 dt 22nd Aug 2007, CIC/AT/A/2008/01202 20th Mar 2009.

17) ವಾದಿಯವರು, ತನ್ನ ಹೆಂಡತಿಯು ತನ್ನ ವಿರುದ್ಧ ವನಿತಾ ಸಹಾಯವಾಣಿಯಲ್ಲಿ ನೀಡಿದ ದೂರಿನ ಪ್ರತಿ, ಸಲಹಾ ಸಭೆಗಳ ದಿನಾಂಕ, ಆ ದೂದಿನ ಮೇಲೆ ಕೈಗೊಂಡ ಕ್ರಮದ ಪ್ರತಿಗಳು ವೈಯಕ್ತಿಕ ಮಾಹಿತಿಯಾಗಿದ್ದು ಈ ಮಾಹಿತಿಯ ಬಹಿರಂಗ ಪಡಿಸುವಿಕೆಯು ಯಾವುದೇ ಸಾರ್ವಜನಿಕ ಚಟುವಟಿಕೆಗೆ ಮತ್ತು ಹಿತಾಸಕ್ತಿಗೆ ಸಂಭಂಧ ಪಡದ್ದರಿಂದ ಅಥವಾ ಒಬ್ಬ ವ್ಯಕ್ತಿಯ ಸ್ವಕೀಯತೆಯಲ್ಲಿ ಅನವಶ್ಯಕ ಪ್ರವೇಶ ಮಾಡುವುದರಿಂದ ಈ ಮಾಹಿತಿಯು ಬಹಿರಂಗಪಡಿಸುವುದರಿಂದ ವಿನಾಯತಿ ಪಡೆದಿದೆ. KIC 1137 COM 2006

18) ಸಾರ್ವಜನಿಕ ಪ್ರಾಧಿಕಾರವು ಸಮಾಜದ ಒಳಿತಿಗಾಗಿ ಬಳಸಬಹುದಾದ ಮಾಹಿತಿಯನು ನಿರಾಕರಿಸತಕ್ಕದ್ದಲ್ಲ. CIC/OK/A/2006/00016 15th Jun 2006

**ಸರ್ಕಾರಿ ರಹಸ್ಯಗಳ ಅಧಿನಿಯಮ ೧೯೨೩ ಮತ್ತು ಪ್ರಕರಣ ೮ ಮತ್ತು ೯ ರಡಿಯ ಮಾಹಿತಿಯಲ್ಲಿ ವಿನಾಯತಿಗಳೇನೇ ಇದ್ದರೂ ಬಹಿರಂಗಪಡಿಸುವಿಕೆಯಿಂದ ಸಂರಕ್ಷಿತ ಹಿತಾಸಕ್ತಿಗಳಿಗೆ ಉಂಟಾಗುವ ಅಪಾಯಕ್ಕಿಂತ ಸಾರ್ವಜನಿಕ ಹಿತಾಸಕ್ತಿಯೇ ಪ್ರಮುಖ ವಾಗಿದ್ದರೆ ಆ ಮಾಹಿತಿಯನ್ನು ನೀಡಬಹುದು.** S8 (2)

Scanned by CamScanner

1) ಸಾರ್ವಜನಿಕ ಪ್ರಾಧಿಕಾರವು ಕೋರಿದ ಮಾಹಿತಿಯು ಬಹಿರಂಗಪಡಿಸುವುದರಿಂದ ವಿನಾಯತಿ ಪಡೆದಿಲ್ಲವೆಂಬುದನ್ನು ತಿಳಿದುಕೊಳ್ಳಬೇಕಾಗುತ್ತದೆ. ಆದಾಗ್ಯೂ ಮಾಹಿತಿಯು ಬಹಿರಂಗಪಡಿಸುವುದರಿಂದ ವಿನಾಯತಿ ಪಡೆದಿದ್ದಲ್ಲಿ ಸಾರ್ವಜನಿಕ ಪ್ರಾಧಿಕಾರವು ಅಂತ ಮಾಹಿತಿಯನ್ನು ಬಹಿರಂಗಪಡಿಸುವುದರಿಂದ ಸಂರಕ್ಷಿತ ಹಿತಾಸಕ್ತಿಗಳಿಗೆ ಉಂಟಾಹುವ ಅಪಾಯಕ್ಕಿಂತ ಸಾರ್ವಜನಿಕ ಹಿತಾಸಕ್ತಿಯೇ ಪ್ರಮುಖವಾಗಿದೆಯೇ ಎನ್ನುವುದನ್ನು ಪರೀಕ್ಷಿಸತಕ್ಕದ್ದು. ಸಾರ್ವಜನಿಕ ಪ್ರಾಧಿಕಾರವು ಸಂದರ್ಭನುಸಾರ ಸಂಗತಿಗಳನ್ನು ಸೂಕ್ತವಾಗಿ ಪರಿಗಣಿಸಿ ನಿರ್ಣಯ ಕೈಗೊಳ್ಳತಕ್ಕದ್ದು ಮತ್ತು ಸ್ಪಷ್ಟ ಆದೇಶ ಹೊರಡಿಸತಕ್ಕದ್ದು. CIC/AT/A/2006/00014 dt 22nd May 2006
2) ಸರ್ಕಾರಿ ರಹಸ್ಯಗಳ ಅಧಿನಿಯಮ 1923 ಮತ್ತು ಪ್ರಕರಣ 8 ಮತ್ತು 9 ರಡಿಯ ಉಲ್ಲಂಘನೆಯಾಗಬಹುದಾದ ಮಾಹಿತಿಯನ್ನು ನಿರಾಕರಿಸಬಹುದು. CIC/WB/A/2006/00274 22nd SEP 2006
3) ಪಕರಣ 8(1)(ಜೆ) ಯ 3ನೇ ಭಾಗವು ಕಾನೂನಿನಿಂದ ಸಂರಕ್ಷಿತಗೊಂಡ ಎರಡು ಹಿತಾಸಕ್ತಿಗಳನ್ನು ಹುರುತಿಸುತ್ತದೆ. ಅಂದರೆ ಸಾರ್ವಜನಿಕ ಪ್ರಾಧಿಕಾರವು ಹೊಂದಿರುವಂತಹ ಮಾಹಿತಿಯು ಪಡೆದುಕೊಳ್ಳುವ ಹಕ್ಕು ಮತ್ತು ಸ್ವಕೀಯತಿಯ ಹಕ್ಕು ಈ ಎರಡು ಹಕ್ಕುಗಳು ಸಂಪೂರ್ಣ ಅಥವಾ ನಿರಪೇಕ್ಷವಲ್ಲ. ಇವೆರಡರ ನಡುವಿನ ನಡುವಿನ ಸಂಘರ್ಷದಲ್ಲಿ ಸಾರ್ವಜನಿಕ ಹಿತಾಸಕ್ತಿಯೇ ಮುಖ್ಯವಾದದು. ಸಾರ್ವಜನಿಕ ಹಿತಾಸಕ್ತಿಯ ಅಂಶವು ಪ್ರಕರಣ 8(1)(ಜೆ) ರಡಿಯಲ್ಲಿನ ವಿನಾಯಿತಿಯನ್ನು ಮೀರಿದೆ. ವ್ಯಕ್ತಿಗತ ಹೌಪ್ಯತೆಯನ್ನು ಅನಗತ್ಯವಾಗಿ ಆಕ್ರಮಿಸುವುದು ಸಾರ್ವಜನಿಕ ಹಿತಾಸಕ್ತಿಯಿಂದ ಸಂರಕ್ಷಿತಗೊಂಡಿದೆ ಆದರೆ ಬಹುಸಂಖ್ಯೆಯ ಸಾರ್ವಜನಿಕ ಹಿತದೃಷ್ಟಿಯ ಆಧಾರದ ಮೇಲೆ ಬಹಿರಂಗಪಡಿಸುವಿಕೆಗೆ ದಾರಿ ಮಾಡಿಕೊಟ್ಟಿದೆ. WP NO. 288/20099, 2ND Sep 2009 – cpio sci NewDelhi v/s Subhash Chandra Agarwal and anr
4) ಕೇವಕ ಮಾಹಿತಿಯು ಬಹಿರಂಗಪಡಿಸುವುದರಿಂದ ವಿನಾಯತಿ ಪಡೆದಿದೆ ಎಂದು ತಿಳಿಸುವುದು ಸಮಂಜಸವಲ್ಲ. ಈ ಮಾಹಿತಿಯನ್ನು ಏಕೆ ಬಹಿರಂಗಪಡಿಸಲಾಗುವುದಿಲ್ಲ ಎಂದು ಕಾರಣಗಳನ್ನು ತಿಳಿಸತಕ್ಕದ್ದು. CIC/OK/A/2009/000132 DT: 12TH June 2009, cic/ok/c/2006/00010 7th July 2006, Cic/ok/a/2006/000166 15th June 2006

Scanned by CamScanner